KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಜೂನ್ ೨, ೨೦೧೧, (ಜ್ಯೇಷ್ಠ ೧೨, ಶಕ ವರ್ಷ ೧೯೩೩)	ಸಂಚಿಕೆ ೨೨

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

COMMERCE AND INDUSTRIES SECRETARIAT

CORRIGENDUM

No. CI 33 SPI 2011, Bangalore Dated : 18-03-2011

Sub: Approval to the Project proposal of M/s Tyco Electronics Corporation India (P) Ltd., to establish a unit for manufacturing Connectors, Cable assemblies and other electro mechanical components at Devanahalli Taluk, Bangalore Rural District.

Ref : Government Order No. CI 33 SPI 2011 dated : 23-02-2011.

In the Order portion of the Government Order No. CI 33 SPI 2011 dated 23-02-2011, under infrastructure facilities : 1. **Land :** the words **"Hardware Park"** be read as **"Aerospace Park".**

Other details, terms and conditions of G.O. referred above remain the same.

By Order and in the name of the Governor of Karnataka

A.V. Srinivasa Dikshit

Desk Officer (Technical Cell),

Commerce and Industries Department.

P.R. 881

COMMERCE AND INDUSTRIES SECRETARIAT

CORRIGENDUM

No. CI 106 SPI 2010, Bangalore Dated : 18-03-2011

Sub: Transfer of approval in favour of M/s Shree Renuka Energy Ltd., from M/s Shree Renuka Infraprojects Ltd.

Read :
1. Government Order No. CI 106 SPI 2010 dated : 29-04-2010.
2. Corrigendum No. : CI 106 SPI 2010, dated : 16-07-2010.
3. Proceedings of the 24th State High Level Clearance Committee (SHLCC) Meeting held on 24-01-2011.

The Government is pleased to transfer the approval given to **"M/s Shree Renuka Infraprojects Ltd.,"** in favour of **"M/s Shree Renuka Energy Ltd.,"** to implement the project vide G.O. & Corrigendum read at (1) & (2) above.

Other terms and conditions, remain the same as in the G.O. read at (1) above.

By Order and in the name of the Governor of Karnataka
A.V. Srinivasa Dikshit
Desk Officer (Technical Cell),
Commerce and Industries Department.

P.R. 882

ಕಂದಾಯ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ : ಕಂಇ 98 ಟಿಎನ್‌ಆರ್ 2011, ಬೆಂಗಳೂರು ದಿನಾಂಕ : 19-03-2011

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 98 ಟಿಎನ್‌ಆರ್ 2011, ಬೆಂಗಳೂರು, ದಿನಾಂಕ : 11-03-2010 ಎಂಬುದರ ಬದಲಾಗಿ "ಆರ್‌ಡಿ 98 ಟಿಎನ್‌ಆರ್ 2011, ಬೆಂಗಳೂರು, ದಿನಾಂಕ 11-03-2011" ಎಂದು ತಿದ್ದಿಕೊಂಡು ಓದುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ. ಗಂಗಾಧರ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ. & ಸೇವೆಗಳು-2)

ಪಿ.ಆರ್. 883

ಆರ್ಥಿಕ ಸಚಿವಾಲಯ

ಸೇರ್ಪಡೆ

ಸಂಖ್ಯೆ : ಆಇ 19 ಬಿಪಿಇ 2010, ಬೆಂಗಳೂರು ದಿನಾಂಕ : 03-03-2011

ಸರ್ಕಾರದ ಆದೇಶ ಸಂಖ್ಯೆ : ಆಇ 19 ಬಿಪಿಇ 2010, ದಿನಾಂಕ : 23-12-2010ರ ಕ್ರಮ ಸಂಖ್ಯೆ : 4ಕ್ಕೆ ಈ ಕೆಳಗಿನಂತೆ ಸೇರ್ಪಡೆ ಮಾಡಿಕೊಳ್ಳುವುದು.

"ಆದರೆ 13ನೇ ಹಣಕಾಸು ಆಯೋಗಕ್ಕೆ ಸಂಬಂಧಿಸಿದ ಎಲ್ಲಾ ಬಿಲ್ಲುಗಳನ್ನು ದಿನಾಂಕ : 31-03-2011 ರೊಳಗೆ ಖಜಾನೆಗಳಿಗೆ ಸಲ್ಲಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಅಜಯ್ ಸೇಠ್
ಸರ್ಕಾರದ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ)

ಪಿ.ಆರ್. 884

ಇಂಧನ ಸಚಿವಾಲಯ

ವಿಷಯ : ನವೀಕರಿಸಬಹುದಾದ ಇಂಧನ ಮೂಲಗಳಾದ ಕಿರುಜಲ/ಪವನ ವಿದ್ಯುತ್ ಯೋಜನೆಗೆ ಸಂಬಂಧಿಸಿದ ಮಾದರಿ ಒಡಂಬಡಿಕೆಯ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 354 ಎನ್‌ಸಿಇ 2008, ದಿನಾಂಕ : 19-01-2010.
2. ತಿದ್ದೋಲೆ ಸಂಖ್ಯೆ : ಇಎನ್ 76 ಇಎಂಸಿ-2 2010, ದಿನಾಂಕ : 06-05-2010.
3. ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ: ಆರ್‌ಡಿ 78 ಎಲ್‌ಜಿಪಿ 2009, ದಿನಾಂಕ: 04-01-2011.

ಪ್ರಸ್ತಾವನೆ:

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಕ್ರಮವಾಗಿ, ಪವನ ವಿದ್ಯುತ್, ಕಿರುಜಲ ವಿದ್ಯುತ್, ಜೈವಿಕ ಶಕ್ತಿ ಮತ್ತು ಇತರ ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆ ಮುಖಾಂತರ ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಪ್ರೋತ್ಸಾಹಿಸುತ್ತಿದೆ. ರಾಜ್ಯದಲ್ಲಿರುವ ಹಸಿರು ಮತ್ತು ಸ್ವಚ್ಛ ನವೀಕರಿಸಬಹುದಾದ ಇಂಧನ ಮೂಲಗಳನ್ನು ಪರಿಸರ ಲಾಭಗಳು ಮತ್ತು ಇಂಧನ ಬದ್ಧತೆಗಾಗಿ ಬಳಸಿಕೊಳ್ಳುವುದು ಸುಸ್ಥಿರ ಬೆಳವಣಿಗೆಗಾಗಿ ಎಲ್ಲಾ ವಲಯಗಳಲ್ಲಿ ಇಂಧನ ದಕ್ಷತೆ ಕ್ರಮಗಳನ್ನು ಕೈಗೊಳ್ಳುವ ಧ್ಯೇಯದಿಂದ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ-2009-14ನ್ನು ಸರ್ಕಾರವು ಘೋಷಿಸಿದೆ ಹಾಗೂ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ತಿದ್ದೋಲೆಯಲ್ಲಿ ಕೆಲವು ಶೀರ್ಷಿಕೆಯಡಿಯಲ್ಲಿ ಸದರಿ ಆದೇಶಕ್ಕೆ ತಿದ್ದುಪಡಿಗಳನ್ನು ಹೊರಡಿಸಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಕಂದಾಯ ಇಲಾಖೆಯ ಸುತ್ತೋಲೆಯಲ್ಲಿ, ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ-2009-14ರನ್ವಯ, ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಸರ್ಕಾರಿ ಜಮೀನುಗಳನ್ನು ಆದ್ಯತೆಯ ಮೇಲೆ ಮಂಜೂರು ಮಾಡಬೇಕಾಗಿರುತ್ತದೆ. ಈವರೆಗೆ ಇಂತಹ ಯೋಜನೆಗಳಿಗೆ ಸರ್ಕಾರಿ ಜಮೀನುಗಳನ್ನು ಮಂಜೂರು ಮಾಡುವಾಗ, ಜಮೀನನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಿ, ಆ ಜಮೀನನ್ನು ಯೋಜನೆಕೈಗೊಳ್ಳುವ ಸಂಸ್ಥೆಗೆ ನಿಯಮಿತವು ಉಪ ಗುತ್ತಿಗೆಗೆ ನೀಡುತ್ತಿತ್ತು. ದಿನಾಂಕ: 03-11-2010 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಇಂಧನ ಇಲಾಖೆಯ ಕೋರಿಕೆಯಂತೆ ಇನ್ನು ಮುಂದೆ ಸರ್ಕಾರಿ ಜಮೀನುಗಳನ್ನು ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಮೂಲಕ ಮಂಜೂರು ಮಾಡುವ ಬದಲಾಗಿ, ನೇರವಾಗಿ ಯೋಜನೆ ಕೈಗೊಳ್ಳುವ ಸಂಸ್ಥೆಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ನಿರ್ಣಯಿಸಲಾಗಿರುತ್ತದೆ. ಆದ್ದರಿಂದ, ಇನ್ನು ಮುಂದೆ ಕರ್ನಾಟಕ ನವೀಕರಿಸಬಹುದಾದ ಇಂಧನ

ಯೋಜನೆಗಳಿಗೆ ಸರ್ಕಾರಿ ಜಮೀನುಗಳನ್ನು ಮಂಜೂರು ಮಾಡುವಾಗ ಯೋಜನೆ ಕೈಗೊಳ್ಳುವ ಇಂತಹ ಸಂಸ್ಥೆಗಳೊಂದಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19ರನ್ವಯ ನೇರವಾಗಿ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಈ ರೀತಿ ಗುತ್ತಿಗೆ ಆಧಾರದ ಮೇಲೆ ನೀಡುವಾಗ, ಗುತ್ತಿಗೆಗೆ ನೀಡುವ ಜಮೀನಿನ ವಿಸ್ತೀರ್ಣವು ಸೋಲಾರ್ ಪವರ್ ಜನರೇಟರ್ ಯಂತ್ರಗಳ foot-print ನ ವಿಸ್ತೀರ್ಣಕ್ಕೆ ಮತ್ತು ಪವಾರ್ ಜನರೇಟರ್ ಸ್ಟೇಷನ್ಸ್‌ಗೆ ಅಗತ್ಯವಿರುವ ವಿಸ್ತೀರ್ಣಕ್ಕೆ ಸೀಮಿತಗೊಳಿಸತಕ್ಕದ್ದೆಂದು ಸೂಚಿಸಲಾಗಿದೆ.

ಅಸಂಪ್ರದಾಯಿಕ ಇಂಧನ ಮೂಲಗಳಾದ ಕಿರುಜಲ ವಿದ್ಯುತ್ ಯೋಜನೆ ಮತ್ತು ಪವನ ವಿದ್ಯುತ್ ಯೋಜನೆಗಳಿಂದ ವಿದ್ಯುತ್ ಉತ್ಪಾದಿಸುವ ಖಾಸಗಿ ವಿದ್ಯುತ್ ಉತ್ಪಾದಕರು ಕಿರುಜಲ/ಪವನ ವಿದ್ಯುತ್ ಯೋಜನೆಯ ಹಂಚಿಕೆಯನ್ನು ಪಡೆದ ಬಳಿಕ, ಸಾಮರ್ಥ್ಯವನ್ನು ಹೆಚ್ಚಿಸಿಕೊಂಡ ಸಂದರ್ಭದಲ್ಲಿ, ಸಾಮರ್ಥ್ಯವನ್ನು ಒಂದು ಕಂಪನಿಯಿಂದ ಇನ್ನೊಂದು ಕಂಪನಿಗೆ ವರ್ಗಾವಣೆ ಮಾಡಿಕೊಂಡಾಗ ಹಾಗೂ ಕಂಪನಿಯ ಹೆಸರನ್ನು ಬದಲಾಯಿಸಿಕೊಂಡಾಗ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಿದ್ದಾರೆ.

ಮೇಲ್ಕಂಡ ಸರ್ಕಾರಿ/ಸುತ್ತೋಲೆ ಹಿನ್ನೆಲೆಯಲ್ಲಿ, ಪ್ರಸ್ತುತ ಚಾಲ್ತಿಯಲ್ಲಿರುವ ಪವನ/ಕಿರುಜಲ ವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದ ಒಡಂಬಡಿಕೆಯನ್ನು ಮಾರ್ಪಡಿಸುವುದು ಸೂಕ್ತವೆಂದು ಸರ್ಕಾರವು ಮನಗಂಡು ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ : ಇಎನ್ 129 ಎನ್‌ಸಿಇ 2011, ಬೆಂಗಳೂರು, ದಿನಾಂಕ: 11–03–2011

ಮೇಲೆ ಪಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಅಸಂಪ್ರದಾಯಿಕ ಇಂಧನ ಮೂಲಗಳಾದ ಕಿರುಜಲ ವಿದ್ಯುತ್ ಯೋಜನೆ/ಪವನ ವಿದ್ಯುತ್ ಯೋಜನೆಗಳಿಂದ ವಿದ್ಯುತ್ ಉತ್ಪಾದಿಸುವ ಖಾಸಗಿ ವಿದ್ಯುತ್ ಉತ್ಪಾದಕರು ಇನ್ನು ಮುಂದೆ ಈ ಆದೇಶದ ಅನುಬಂಧ–1/2 ರಲ್ಲಿರುವ ಮಾದರಿಯಲ್ಲಿರುವಂತೆಯೇ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

ಅಭಿವೃದ್ಧಿದಾರರು ಸಲ್ಲಿಸುವ ಒಡಂಬಡಿಕೆಗಳನ್ನು ಸರ್ಕಾರಕ್ಕೆ ಕಳುಹಿಸುವ ಮುನ್ನ ಕರ್ನಾಟಕ ನವೀಕರಿಸಬಹುದಾದ ಇಂದನ ಅಭಿವೃದ್ಧಿ ನಿಯಮಿತವು ಅವುಗಳನ್ನು ಪರಿಶೀಲಿಸಿ, ದೃಢೀಕರಿಸಿ ಕಳುಹಿಸಿಕೊಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

HYDEL POWER PROJECT

ANNEXURE - I TO G.O. No. EN 129 NCE 2011 DATED:

THIS AGREEMENT IS EXECUTED AT BANGALORE ON THIS THE DAY OF ……………………………………………..

BETWEEN

THE GOVERNMENT OF KARNATAKA, REPRESENTED BY THE ACS/PRINCIPAL SECRETARY TO GOVERNMENT, DEPARTMENT OF ENERGY hereinafter referred to as "Government" which shall include successors and assignees.

AND

M/s Sri. …………………………………………………………………………………. having its/his registered office at ……………………………... . hereinafter referred to as "Company"/Individual which include its successors and assignees.

1. Whereas the State of Karnataka has decided to permit private sector to generate electricity from Hydel Power Project in the State.
2. M/s/Sri ……………………………………………………………………………….. have/has requested KREDL to grant permission to set up a Mini Hydel Power Plant across ………… river …………. near ……….. Village, ……………… Taluk of ………… District of …………………… MW capacity (Weir Latitude: ………, Longitude: ……………… and Power House Latitude: ……………….. Longitude: …………). Government was pleased to accord permission, vide G.O. No. …………………Bangalore, Dated………………………………
3. Now, parties to this agreement have agreed for the following terms:
4. The land required for setting up of a Mini Hydel Power Plant shall be acquired by Company,
   a) If the required land is private land, the company has to acquire the same directly from landowners by any mode of transfer. If it is taken on lease, the minimum period of lease shall be 30 years.
   b) If the required land belongs to Government, the Company shall approach concerned Department, i.e. Revenue/Forest or Irrigation Department, as the case may and request may be made, to lease the land in favour of Company. As per the circular No. RD 78 LPG 2009 dated 4.1.2011 of Revenue Department. Revenue Department will directly lease the land to the company. The period of lease shall be 30 years. At the end of 30 years the lease shall be extended for 5years. At a time subject to any condition stipulated by Government
   c) In case, if the land belongs to Forest Department, Forest Department will issue facilitation letter as per the standard draft approved by MOEF, GOI. New Delhi vide letter no.F.No.: 11-113/2008 FC Dated: 30-12-2008.

d) The total period considered for the completion of the project shall not exceed beyond 5 years. However, the Company can make the request for the extenson of time if any which shall not be more than 1 year. In exceptional circumstances if the Company requires further extension the Government may determine the time of such extension depending upon merit of case and accord extension of time with penalty if need be. However, the total period of time for commissioning the project shall not exceed beyond 6 years excluding exceptional time extension if any. The date of allotment shall be the basis for calculation of time.

e) The company shall not mortgage the leased property to any financial institutions during the existence of this agreement.

f) The Company shall engage its own consultants to take up all investigations to locate the place of project. KREDL has no role to play in identifying the place suitable for the project. However prior approval of the KREDL is mandatory before finalizing the scheme.

5) The company shall remit water cess/royalty as applicable from time to time, to the Government.

6) The company shall pay statutory levies as applicable from time to time to the Department of Electrical Inspectorate/KREDL/KPTCL/ESCOM'S or to the Government of Karnataka as the case may be to get clearances.

a) Company shall bear the cost of any modifications or Improvements to the existing Irrigation structures, which may be carried out during the existence of this lease period.

b) Company shall bear the cost of any modifications required for the head works. Company shall deposit estimated cost within two months from the date of acceptance of the project report.

c) Company shall bear the difference of cost (actual cost incurred estimated cost) and that shall be paid within two months from the date of intimation.

d) If irrigation Department takes up any works for safeguarding and strengthening head works during the existence of lease period, such expenditure shall be borne by Irrigation Department and Company proportionately.

e) Transmission line from the power House to the KPTCL/ESCOM grid point shall be constructed by developer as per KPTCL/ESCOM prevailing rules at Company's cost. The Transmission line would be maintained by KPTCL/ESCOM as the case may be.

7. The company shall pay Banking and Wheeling charges to KPTCL/ESCOMs at the rates prescribed by the KERC from time to time. The Company shall enter into Wheeling and Banking agreement with KPTCL in case of selling power to the third party and power purchase agreement in case of selling power to the KPTCL.

8. The company shall furnish its scheme of construction of the Mini Hydel Plant with broad details of layout and get it approved by the KREDL. The Company shall execute the works connected with the construction and installation of the hydraulic structure likely to affect the existing irrigation facilty after obtaining due approval of the KREDL.

KREDL shall reserve its right to inspect the Power Generating Unit to verify due compliance of the designs and prescribed specifications and to ensure quality control. The broad detail of layout and the detail design and drawings of the hydraulic structures as mentioned above shall be got approved by KREDL on payment of non-refundable processing fees as fixed by Government from time to time.

9. The release of water shall be totally controlled by the Irrigation Department, KPCL (wherever KPCL is Controlling water) when there is no power generaton. In the event of power generation, the inflow into the turbine in the power house shall be controlled by the Irrigation Department/KPCL to the extent of the flows required either for irrigation or otherwise from time to time and the company will provide suitable mechanism, for this purpose.

No claim by the company for compensation or whatsoever shall be entertained, when the quantity of flow of water is varied or when the water supply is entirely cut-off, depending on the irrigation needs.

programming of the operations of the canal in each season as soon as finalized shall be informed to the company. The Irrigation Department shall have the rights to vary the quantities of Water in the canal, depending on the needs of the irrigation. The Company shall incorporate a suitable mechanism or device in the system, which ensures the required discharge in the canal at the tailrace, when the generator fails by itself or due to the fault in the grid.

10. The company shall pay all the expenditure incurred by KPCL on the project till the date of agreement and all the commitments made by the KPCL, on these projects with various departments of the Government such ad Revenue Department for Land Acquisition, Irrigation Department for charges of water/irrigation structure etc., within three months from the date of execution of the agreement.

11. The company shall engage its own consultants and to take up all investigations of the project. KREDL has no role to play in identifying the place suitable for the project. However, piror approval of the KREDL is mandatory before the finalizing the scheme.

12. The company shall complete all formalities, within two years from the date of allotment for obtaining all statutory clearances and preparation of DPR. Further a period of 3 years for implementing and commissioning of the project is allowed. In exceptional circumstances, at the request of the Company, Government may extend one more year time subject to payment of Time extension fee as per applicable fee. If the company fails to comply with the requirements within 6 years this lease agreement will cease to be in force. Consequently the security deposit will be forfeited.

13. the Company shall ensure that the construction of the powerhouse does not endanger either the dam or any other structure in the vicinity.
14. During the course of the execution of project work, if any damage is caused to public or private property, the Company shall made good the loss by way of damges. It is the sole responsibility of the company to safeguard the life and limbs of workers.
15. Incentives/Exemptions as applicable from time to time will be extended as per the Government Orders in force from time to time.
16. In the events of any disputes of differences arising between Irrigation Department, Forest/Revenue Departments, KPTCL/ESCOM KPCL., KREDL, on the one hand and the Company on the other hand, with regard to the execution, implementation and the commissioning of the project or interpretation of this agreement or provisions thereof or any claim arising there under, the decision of the Government shall be final and binding.
17. At any point of time, either before or after commissioning of the Small Hydro Power Project, if it is found that the Company has furnished any wrong information or concealed any information or violates any lease conditions the agreement is liable to be terminated and the project taken over by the Government without any compensation.
18. In case of failure of machinery, the company shall set-right the same for proper functioning of the project within a period of 3 months, failing which the Government may take over the project.
19. All matters are subject to jurisdiction of courts situated within the State of Karnataka.
20. This agreement shall be subject to the guidelines issued by the Government of India & State Government of Karnataka from time to time.

IN WITNESS WHEREOF The parties above named have executed this agreement in the presence of the witnesses attesting hereunder.

For M/s. …………………………………..
Authorized Signatory

Witnesses
(1)
(2)

WIND POWER PROJECT

ANNEXURE - II TO G.O. NO. EN 129 NCE 2011 DATED:

THIS AGREEMENT IS EXECUTED AT BANGALORE ON THIS ……………………….…. DAY OF ……………….……….

BETWEEN

THE GOVERNMENT OF KARNATAKA, REPRESENTATED BY THE ACS/PRINCIPAL SECRETARY TO GOVERNMENT, DEPARTMENT OF ENERGY hereinafter referred to as "Government" which shall include successors and assignees.

AND

M/s./Sri. ……………………………………………………… having its registered office ……………………….. ………………………………………. Hereinafter referred to as "Company" which include its successors and assignees.

WHEREAS the State of Karnataka has decided to permit private sector to generate electricity from Wind Energy Projects in the State.

M/s./Sri. ………………………………………………. Have/has requested KREDL to grant permission to set up/transfer/enhancement a Wind Power Project of …………………….. MW capacity in the village/villages ……………………………. In ……………………. Taluk …………………………………………… District, Karnataka and the same having being recommended by KREDL vide it letter No. ………………….. dated: …………………………… the Government had accorded approval for the project vide GO. No.: ……………………………. Dated: ……………………………..

The details of the geographical area for the development of …………………………………………………. MW capacity Wind Power Project is shown below:

………............

…….. Now, parties to this agreement have agreed for the following terms:

1. The land required for setting up of a Wind Energy Power Plant shall be acquired by Company,
   a) If the required land is private land, the company has to acquire the same directly from landowners by any mode of transfer. If it is on lease, the period of lease shall be 30 years.
   b) If the required land belongs to Government, the Company shall approach concerned Department, i.e., Revenue/Forest or Irrigation Department, as the case may be for obtaining the land on lease basis in favour of Company. As per the circular No. RD 78 LPG 2009 dated 4.1.2011 of Revenue Department. Revenue Department will directly lease the land to the company. The period of lease shall be 30 years. At the end of 30 years the lease shall be extended for 5 years at a time subject to any conditions stipulated by Government.
   c) In case, if the land belongs to Revenue/Irrigation/Industries Department, mortgage sublease will be in accordance with the conditions given by the concerned Department.
   d) In case, if the land belonging to Forest Department, Forest Department should issue facilitation letter as per the Standard draft approved by MOEF, GOI, New Delhi vide letter No.F.No.: 11-113/2008 FC Dated: 30-12-2008.
   e) The period of project shall coincide with the renewal of lessed land.
   f) It is mandatory for the company to complete the project in all respects and commission the project with Grid Synchronization with in a period of 3 years from the date of obtaining all statutory clearances. The company shall apply to the concerned Departments for statutory clearances with in a reasonable time from the date of allotment.
2. The Company shall pay all statutory levies to ESCOMS/KPTCL/Electrical Inspectorate as case may be to get the clearances.
3. Wheeling and banking charges shall be paid by Company as per the rates fixed by KERC from time to time.
4. The metering will be done at the generating station as per Central Electricity Authority (Installation and Operation of Meters) Regulations, 2006 and amendments issued from time to time.
5. The Company shall execute all works connected to the project in accordance with the approval obtained from the respective department.
6. KREDL reserves its right to inspect power generating project to verify due compliance of designs and specifications and to ensure quality control.
7. Company shall deposit 01% of the security deposit with KREDL on receipt of allotment Order. Remaining 99% of security deposit will be in the form of Bank Guarantee, will be deposited with the KREDL only after obtaining the statutory clearances from the respective departments required for the project.
8. The company is permitted to take up suo-moto investigations for collection of data by engaging its own consultants.
9. The Company shall notify Government on occurring of any amalgamation or splitting up of Wind Power Projects allotted/Transferred. Following the formation from the company, the required modification/addendum/corrigendum shall be issued from the Government.
10. In the course of executing the project, if any damage is caused to private or public properties; the Company shall make good the loss, by way of damages.
11. Incentives/Exemptions, as applicable from time to time, will be extended to the company as per the Government Orders in force from time to time.
12. All charges applicable for sale of Energy to 3rd Party shall be paid by the Company as per the KERC Order dated: 11-7-2009 subject to the amendment issued by KERC from time to time.
13. If any dispute or difference of opinion arises between the parties, as to the execution, implementation and commencement of the project, the decision of the Government will prevail.
14. This agreement shall be subject to the guidelines issued by the Government of India and State Government of Karnataka from time to time.

IN WITNESS WHEREOF The parties above named have executed this agreement in the presence of the witnesses attesting hereunder.

For M/s. …………………………………….
Authorized Signatory

Witnesses
(1)
(2)

SURESH B. KRISHNAPPANAVAR
Under Secretary to Government
Energy Department.

PR 794

ಇಂಧನ ಸಚಿವಾಲಯ

ವಿಷಯ : ರಾಜ್ಯದಲ್ಲಿರುವ ಅನಧಿಕೃತ ನೀರಾವರಿ ಪಂಪ್ ಸೆಟ್‌ಗಳ ಸಕ್ರಮೀಕರಣದ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಡಿಇ 59 ಪಿಎಸ್‌ಆರ್ 2003 ದಿನಾಂಕ : 21-10-2003.
2. ಸರ್ಕಾರಿ ಆದೇಶ ಸಂಖ್ಯೆ : ಇಎನ್ 144 ಪಿಎಸ್‌ಆರ್ 2004 ದಿನಾಂಕ : 15-03-2005.
3. ಸರ್ಕಾರಿ ಆದೇಶ ಸಂಖ್ಯೆ : ಇಎನ್ 170 ಪಿಎಸ್‌ಆರ್ 2006 ದಿನಾಂಕ : 31-10-2006.

ಪ್ರಸ್ತಾವನೆ:

1) 2003-04ರ ಸಾಲಿನಲ್ಲಿ ಸುಮಾರು 1.35 ಲಕ್ಷ ಅನಧಿಕೃತ ಪಂಪುಸೆಟ್ಟುಗಳಿದ್ದು, ಇಂತಹ ಅನಧಿಕೃತ ಪಂಪುಸೆಟ್ಟುಗಳ ಕನೆಕ್ಷನ್ ತೆಗೆದುಹಾಕುವುದು ಕಷ್ಟಕರವಾದ್ದರಿಂದ ಮತ್ತು ಇಂತಹ ಕನೆಕ್ಷನ್‌ಗಳಿಂದ ಟ್ರಾನ್ಸ್‌ಫಾರ್ಮರ್‌ಗಳಿಗೆ ಹೆಚ್ಚು ಲೋಡ್ ಆಗುವುದರಿಂದ, ಟ್ರಾನ್ಸ್‌ಫಾರ್ಮರ್‌ಗಳ ವಿಫಲತೆ ಮತ್ತು ಹೆಚ್ಚು ನಷ್ಟ ಉಂಟಾಗುವುದರಿಂದ, ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶ ಸಂಖ್ಯೆ: ಡಿಇ 59 ಪಿಎಸ್‌ಆರ್ 2003, ದಿನಾಂಕ: 21-10-2003ರಲ್ಲಿ OYT ಯೋಜನೆ ಅಡಿಯಲ್ಲಿ ರೂ. 35,000/-ಗಳನ್ನು ಪಾವತಿಸುವ ಪ್ರತಿಯೊಬ್ಬ ಪಂಪ್‌ಸೆಟ್ ಬಳಕೆದಾರರ ಪಂಪಸೆಟ್‌ಗಳನ್ನು ಸಕ್ರಮಗೊಳಿಸಲು ತೀರ್ಮಾನಿಸಲಾಗಿತ್ತು. ನಂತರ. ಈ ಮೊತ್ತವನ್ನು ರೂ. 25,000/-ಕ್ಕೆ ಇಳಿಸಲಾಯಿತು. OYT ಯೋಜನೆ ಜಾರಿ ಮಾಡಿದ್ದರಿಂದ, 2004-05ರ ಸಾಲಿನಲ್ಲಿ ಹೊಸ ಪಂಪುಸೆಟ್ಟುಗಳ ವಿದ್ಯುದ್ದೀಕರಣ ಪ್ರಗತಿಯ ಬಹಳ ಕುಂಠಿತವಾಗಿದೆ. ಅನಧಿಕೃತ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಲು ವಿವಿಧ ಕಾರ್ಯಕ್ರಮ ಹಾಕಿಕೊಂಡಿದ್ದರೂ ಸಹ ವಿದ್ಯುತ್ ಸರಬರಾಜು ಕಂಪನಿಗಳಿಗೆ ರಿಯಾಯಿತಿ ದರದಷ್ಟು ಶುಲ್ಕವನ್ನು ಸಹ ಸಂಗ್ರಹಿಸಲು ಸಾಧ್ಯವಾಗಿರುವುದಿಲ್ಲ.

2) ಈ ಸಮಸ್ಯೆಯ ನಿವಾರಣೆಗಾಗಿ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರಿ ಆದೇಶ ಸಂಖ್ಯೆ: ಇಎನ್ 144 ಪಿಎಸ್‌ಆರ್ 2004, ದಿನಾಂಕ: 15-03-2005ರಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ:-

ಎ) OYT ಯೋಜನೆಯನ್ನು ಅನುಸರಿಸದೆ ದಿನಾಂಕ: 31-12-2004ರಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಅನಧಿಕೃತ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸುವುದು ಮತ್ತು ವಾಡಿಕೆಯಂತೆ ಪಾವತಿಸುವ ವಾರ್ಷಿಕ ಕನಿಷ್ಟ ಠೇವಣಿ ಮತ್ತು ಮೀಟರ್‌ನ ಭದ್ರತಾ ಠೇವಣಿಯೊಂದಿಗೆ ಪ್ರತ್ಯೇಕವಾಗಿ ಪ್ರತಿ ಪಂಪುಸೆಟ್‌ಗಳನ್ನು ಸಕ್ರಮಗೊಳಿಸಲು ರೂ. 10,000/- ಗಳನ್ನು ಸಂಗ್ರಹಿಸುವುದು.

ಬಿ) ಅನಧಿಕೃತ ಪಂಪುಸೆಟ್‌ಗಳನ್ನು ಸಕ್ರಮಗೊಳಿಸಲು ಎಸ್ಕಾಂಗಳಿಗೆಏಕಕಾಲಿಕ ಸಹಾಯಕವಾಗಿ (One time support) ರೂ. 173.66 ಕೋಟಿಯನ್ನು ಮಂಜೂರು ಮಾಡುವುದು.

ಸಿ) ಸಕ್ರಮಗೊಳಿಸುವ ಈ ಯೋಜನೆಯನ್ನು ರೈತರಿಗೆ ಕೊನೆ ಅವಕಾಶವಾಗಿ ಪ್ರಕಟಿಸುವುದು ಮತ್ತು ಈ ಯೋಜನೆಯನ್ನು 30-04-2005ರ ನಂತರ ವಿಸ್ತರಿಸದಿರುವುದು.

ಡಿ) ಈ ಹಿಂದೆ ಆಚರಣೆಯಲ್ಲಿದ್ದ OYT ಯೋಜನೆಯನ್ನು ಹಿಂದಕ್ಕೆ ಪಡೆದು 2005-06ನೇ ಸಾಲಿನಲ್ಲಿ ರೂ. 232.02 ವೆಚ್ಚದಲ್ಲಿ 60.000 ಹೊಸ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡುವುದು.

ಇ) 60,000 ಹೊಸ ಪಂಪುಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡುವ ಸಲುವಾಗಿ ಸರ್ಕಾರದಿಂದ ಸಹಾಯವಾಗಿ ರೂ. 60 ಕೋಟಿಗಳನ್ನು ಮಂಜೂರು ಮಾಡುವುದು ಉಳಿದ ವೆಚ್ಚವಾದ ರೂ. 172.03 ಕೋಟಿಗಳನ್ನು ವಿದ್ಯುತ್ ಸರಬರಾಜು ಕಂಪನಿಗಳೇ ಭರಿಸುವುದು.

ಎಫ್) OYT ಯೋಜನೆಯಂತೆ ಹೊಸ ಪಂಪುಸೆಟ್‌ಗಳ ವಿದ್ಯುದ್ದೀಕರಣಗೊಳಿಸುವುದನ್ನು ಕೇವಲ ಐಚ್ಛಿಕವನ್ನಾಗಿಸುವುದು.

3) ಸಕ್ರಮಗೊಳಿಸಲಾದ ಎಲ್ಲಾ ಪಂಪುಸೆಟ್ಟುಗಳ ಸಂಪರ್ಕಗಳಿಗೆ ಮತ್ತು ಹೊಸದಾಗಿ ಸಂಪರ್ಕ ನೀಡಲಾದ ಪಂಪುಸೆಟ್ಟುಗಳಿಗೆ ಕಡ್ಡಾಯವಾಗಿ ಮೀಟರ್‌ನ್ನು ಅಳವಡಿಸುವುದು. ಅನಧಿಕೃತ ಪಂಪ್‌ಸೆಟ್‌ಗಳ ಸಕ್ರಮೀಕರಣ ಅವಧಿಯನ್ನು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ದಿನಾಂಕ: 31-03-2007ರವರೆಗೆ ವಿಸ್ತರಿಸಲಾಗಿತ್ತು. ಆನಂತರದ ಅವಧಿಯಲ್ಲಿ ದಿನದಿಂದ ದಿನಕ್ಕೆ ಅನಧಿಕೃತ ಪಂಪ್‌ಸೆಟ್‌ಗಳ ಸಂಖ್ಯೆಯು ಹೆಚ್ಚುತ್ತಾ ಹೋಗುತ್ತಿದ್ದು ವಿತರಣಾ ಕಂಪನಿಗಳಿಗೆ ಇವುಗಳ ನಿಯಂತ್ರಣವು ಕಷ್ಟವಾಗುತ್ತಿದೆ. ಡಿಸೆಂಬರ್ 2010 ರ ಕೊನೆಯ ವೇಳೆಗೆ ರಾಜ್ಯದಲ್ಲಿ ಸುಮಾರು ಒಂದೂವರೆ ಲಕ್ಷ ಅನಧಿಕೃತ ಪಂಪ್‌ಸೆಟ್‌ಗಳಿರುತ್ತವೆ.

4) ಸರ್ಕಾರವು ರೈತರಿಗೆ ನೀಡಿದ ಆಶ್ವಾಸನೆಯಮತೆ 10 ಅಶ್ವಶಕ್ತಿವರೆಗಿನ ನೀರಾವರಿ ಪಂಪ್‌ಸೆಟ್‌ಗಳಿಗೆ ಆಗಸ್ಟ್ 2008 ರಿಂದ ಉಚಿತ ವಿದ್ಯುತ್ ಸರಬರಾಜಿನ ಘೋಷಣೆ ಮಾಡಿರುತ್ತದೆ. ಇದನ್ನು ಮನಗಂಡಿರುವ ರೈತರು ಅನಧಿಕೃತ ಪಂಪ್‌ಸೆಟ್‌ಗಳ ಸಕ್ರಮಕ್ಕೆ ಮುಂದಾಗುತ್ತಿಲ್ಲ.

5) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ತಮ್ಮ ಪತ್ರ ಸಂಖ್ಯೆ: 1/06/1931 ದಿನಾಂಕ: 18-12-2006 ರಲ್ಲಿ ಪದೇ ಪದೇ ವಿಸ್ತರಿಸುತ್ತಿರುವ ಅನಧಿಕೃತ ಪಂಪ್‌ಸೆಟ್‌ಗಳ ಸಕ್ರಮೀಕರಣ ಕಾರ್ಯವನ್ನು ಆಕ್ಷೇಪಿಸಿದೆ.

6) ಈ ಸಂಬಂಧ ಒಂದು ನಿರ್ದಿಷ್ಟ ನಿಯಮಾವಳಿಯನ್ನು ರೂಪಿಸುವ ಸಲುವಾಗಿ ದಿನಾಂಕ: 15-01-2009 ರಂದು ಸಭೆಯನ್ನು ಕರೆದು ಅನಧಿಕೃತ ಪಂಪ್‌ಸೆಟ್‌ಗಳ ಸಕ್ರಮೀಕರಣಕ್ಕೆ ಸಂಬಂಧಿಸಿದಂತೆ ಕೆಳಗಿನ ವಿಷಯಗಳ ಬಗ್ಗೆ ಚರ್ಚಿಸಲಾಯಿತು:-

* ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ವಿತರಣಾ ಜಾಲಕ್ಕೆ ನಿರಂತರವಾಗಿ ಸೇರ್ಪಡೆಗೊಳ್ಳುತ್ತಿರುವುದು ಒಂದು ಚಲನಾತ್ಮಕ ಪದ್ಧತಿಯಾಗಿರುವುದನ್ನು ಖಾತರಿ ಪಡಿಸಿಕೊಳ್ಳಲಾಯಿತು.
* ರೈತರು ತಮ್ಮ ಜಮೀನಿನಲ್ಲಿ ಕೊಳವೆ ಬಾವಿಗಳನ್ನು ಯಾವುದೇ ಇಲಾಖೆಯ ನಿರ್ಬಂಧವಿಲ್ಲದೆ ಎಲ್ಲೆಂದರಲ್ಲಿ ತೋಡುತ್ತಿರುತ್ತಾರೆ. ಸ್ಥಳದ ಅಂರ್ಜಲ ಪ್ರಮಾಣದ ಬಗ್ಗೆ ಯಾವುದೇ ಮಾಹಿತಿಯನ್ನು ಪಡೆಯುತ್ತಿಲ್ಲ.

* ಈ ಹಿಂದೆ ಗಣಿ ಮತ್ತು ಭೂಗರ್ಭ ಇಲಾಖೆಯು 2001 ರಲ್ಲಿ ಹೊರಡಿಸಿದ್ದ ಆದೇಶದ ಪ್ರಕಾರ ಕಪ್ಪು ಮತ್ತು ಬೂದು ತಾಲ್ಲೂಕುಗಳಲ್ಲಿ ಕೊಳವೆ ಬಾವಿ ತೋಡುವುದನ್ನು ನಿರ್ಬಂಧಿಸಿತ್ತು. ಆದರೆ ಅದರಂತೆ ಕಪ್ಪು ತಾಲ್ಲೂಕುಗಳಲ್ಲಿ ಕೊಳವೆ ಬಾವಿಗಳನ್ನು ತೋಡುವುದನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಿರುವುದಿಲ್ಲ.
* ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಫಲಾನುಭವಿಗಳಿಗೆ ಸೇರಿದ ನೀರಾವರಿ ಪಂಪ್‌ಸೆಟ್‌ಗಳಿಗೆ ಸಂಪರ್ಕವು ನಿರ್ದಿಷ್ಟ ಯೋಜನೆಗಳ ಮುಖಾಂತರ ದೊರೆತು ಸಕ್ರಮಗೊಳ್ಳುತ್ತಿವೆ. ಆದರೆ ಸಾಮಾನ್ಯ ವರ್ಗದ ಜನರಿಗೆ ಸೇರಿದ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಯಾವುದೇ ಯೋಜನೆಗಳಿರುವುದಿಲ್ಲ. ಇದರಿಂದಾಗಿ ಅನಧಿಕೃತ ಪಂಪ್‌ಸೆಟ್‌ಗಳ ಪ್ರಮಾಣ ಹೆಚ್ಚುತ್ತಿದೆ.
* ಹಾಲಿ ಇರುವ ವಿದ್ಯುತ್ ವಿತರಣಾ ಮಾರ್ಗದಿಂದ ದೂರದಲ್ಲಿರುವ ಅನಧಿಕೃತ ನೀರಾವರಿ ಪಂಪ್ ಸೆಟ್‌ಗಳ ಸಕ್ರಮೀಕರಣಕ್ಕೆ ವಿತರಣಾ ಕಂಪನಿಗಳು ಹೊಸದಾಗಿ ವಿದ್ಯುತ್ ಮಾರ್ಗ ಸೌಕರ್ಯವನ್ನು ಕಲ್ಪಿಸಲು ಪ್ರತಿ ಪಂಪ್‌ಸೆಟ್‌ಗೆ ಅಂತಹ ಪ್ರಕರಣಗಳಲ್ಲಿ ಅಂದಾಜು ರೂ. 70,000/– ವೆಚ್ಚವಾಗಲಿದೆ. ಇದರಿಂದ ವಿತರಣಾ ಕಂಪನಿಗಳಿಗೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುತ್ತದೆ.
* ಅನಧಿಕೃತ ಪಂಪ್‌ಸೆಟ್‌ಗಳಿಗೆ ಅಳವಡಿಸಿರುವ ಕಳಪೆ ಗುಣಮಟ್ಟದ ವೈರಿಂಗ್ ಮತ್ತು ಉದ್ದನೆಯ ಸೇವಾ ಮಾರ್ಗದಿಂದ ವಿದ್ಯುತ್ ಅಪಘಾತವು ಉಂಟಾಗುವ ಸಂಭವವಿರುತ್ತದೆ. ಇದರಿಂದ ಮನುಷ್ಯ ಅಥವಾ ಪ್ರಾಣಿಗಳ ಜೀವ ಮತ್ತು ಆಸ್ತಿಗೆ ಹಾನಿ ಉಂಟಾಗುವ ಅಪಾಯವಿದೆ.
* ಅನಧಿಕೃತ ಪಂಪ್‌ಸೆಟ್‌ಗಳು ಬಳಸುವ ವಿದ್ಯುಚ್ಛಕ್ತಿ ಮತ್ತು ಅವುಗಳಿಂದ ಉಂಟಾಗುವ ವಿತರಣಾ ನಷ್ಟವು ಲೆಕ್ಕಕ್ಕೆ ಸಿಗುತ್ತಿಲ್ಲ. ಅಂದಾಜಿನ ಪ್ರಕಾರ ದಿನದ ವಿದ್ಯುಚ್ಛಕ್ತಿ ಬಳಕೆಯ ಸುಮಾರು 40–45% ವಿದ್ಯುಚ್ಛಕ್ತಿಯನ್ನು ಪಂಪ್‌ಸೆಟ್‌ಗಳು ಬಳಸುತ್ತಿದೆ.

7) ದಿನಾಂಕ: 11–05–2010 ರಂದು ವಿಧಾನ ಸಭೆಯ ಅಂದಾಜು ಸಮಿತಿ ಸಭೆಯಲ್ಲಿ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ ಹೆಚ್ಚಾಗಿದ್ದು ಇದರಿಂದ ಅನಧಿಕೃತ ವಿದ್ಯುತ್ ಬಳಕೆ ಹೆಚ್ಚಾಗುತ್ತಿದೆ ಮತ್ತು ವಿತರಣಾ ಪರಿವರ್ತಕಗಳ ಮೇಲಿನ ಹೊರೆ ಹೆಚ್ಚಾಗಿ, ಪರಿವರ್ತಕಗಳು ವಿಫಲವಾಗಿತ್ತಿವೆ. ಇದನ್ನು ತಡೆಗಟ್ಟಿ ಅನಧಿಕೃತ ಪಂಪ್‌ಸೆಟ್‌ಗಳ ಸಕ್ರಮೀಕರಣಗೊಳಿಸಲು ಒಂದು ನಿರ್ದಿಷ್ಟ ಕಾರ್ಯನೀತಿ ರೂಪಿಸಿ ಪ್ರಕಟಿಸಬೇಕೆಂದು ಅಂದಾಜು ಸಮಿತಿ ಸದಸ್ಯರು ತಿಳಿಸಿರುತ್ತಾರೆ.

8) ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮೀಕರಣಗೊಳಿಸುವ ಬಗ್ಗೆ ಪರಿಶೀಲಿಸಲಾಗಿದೆ. ಈ ಕುರಿತು ಇಂದನ ಇಲಾಖೆಯು ಒಂದು ನೀತಿಯನ್ನು ರೂಪಿಸುವ ಅವಶ್ಯವಿದೆಯೆಂದು ತಿಳಿಸಿರುತ್ತಾರೆ.

9) ಮೇಲೆ ತಿಳಿಸಿದ ಕಾರಣಗಳಿಂದಾಗಿ ಅನಧಿಕೃತ ಪಂಪುಸೆಟ್ಟುಗಳ ಸಕ್ರಮೀಕರಣಗೊಳಿಸುವ ಬಗ್ಗೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಎನ್ 09 ಪಿಎಸ್‌ಆರ್ 2011, ಬೆಂಗಳೂರು, ದಿನಾಂಕ: 11–03–2011

ರಾಜ್ಯದ ಎಲ್ಲಾ ವಿತರಣಾ ಕಂಪನಿಗಳ ವ್ಯಾಪ್ತಿಯಲ್ಲಿ ಬರುವ ಅಕ್ರಮ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ:–

1. ನೀರಾವರಿ ಕಾಲುವೆಗಳಿಂದ ಅನಧಿಕೃತವಾಗಿ ನೀರನ್ನು ಬಳಸುತ್ತಿರುವ ಕೃಷಿ ಪಂಪ್‌ಸೆಟ್‌ಗಳನ್ನು ಹೊರತುಪಡಿಸಿ, 28–02–2011ರ ಅಂತ್ಯಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಅನಧಿಕೃತ ನೀರಾವರಿ ಪಂಪುಸೆಟ್‌ಗಳನ್ನು (ಕಪ್ಪು ಮತ್ತು ಬೂದು ಪ್ರದೇಶಗಳಲ್ಲಿರುವ ಕೃಷಿ ಪಂಪ್‌ಸೆಟ್‌ಗಳೂ ಸೇರಿದಂತೆ) ಸಕ್ರಮೀಕರಣಗೊಳಿಸಲು ವಿದ್ಯುತ್ ಸರಬರಾಜು ಕಂಪನಿಗಳಿಗೆ ಅನುಮತಿ ನೀಡಲಾಗಿದೆ.
2. ಮಾಪಕ ಭದ್ರತಾ ಠೇವಣಿ ಹೊರತುಪಡಿಸಿ ಪ್ರತಿ ನೀರಾವರಿ ಪಂಪ್‌ಸೆಟ್‌ಗೆ ರೂ. 10,000 ಜೊತೆಗೆ 2 ತಿಂಗಳ ಕನಿಷ್ಠ ಠೇವಣಿ (2 ಎಂ.ಎಂ.ಡಿ) ಹಣವನ್ನು ಫಲಾನುಭವಿಗಳಿಂದ ಪಡೆಯತಕ್ಕದ್ದು.
3. ಈ ಸಂಬಂಧ ತಗಲುವ ವೆಚ್ಚದಲ್ಲಿ ಪ್ರತಿ ನೀರಾವರಿ ಪಂಪ್‌ಸೆಟ್‌ಗೆ ರೂ. 25,000/–ರವರೆಗೆ ರಾಜ್ಯ ಸರ್ಕಾರದಿಂದ ಭರಿಸಲಾಗುತ್ತದೆ. ಬಾಕಿ ಉಳಿದ ವೆಚ್ಚವನ್ನು ವಿತರಣಾ ಕಂಪನಿಗಳು ಭರಿಸಬೇಕಾಗಿರುತ್ತದೆ.
4. ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸುವ ವಿತರಣಾ ಪರಿವರ್ತಕ ಕೇಂದ್ರಗಳಲ್ಲಿ ವಿದ್ಯುತ್ ಮಾಪಕಗಳನ್ನು ಅಳವಡಿಸತಕ್ಕದ್ದು.
5. 28–02–2011ರ ನಂತರ ಅನಧಿಕೃತ ವಿದ್ಯುತ್ ಸಂಪರ್ಕ ಪಡೆಯುವ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸ್ಥಗಿತಗೊಳಿಸಿ ಪ್ರಕರಣ ದಾಖಲಿಸಿಕೊಂಡು ದಂಡ ವಿಧಿಸತಕ್ಕದ್ದು.

ಅಕ್ರಮ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿಕೊಳ್ಳಲು ದಿನಾಂಕ: 30–09–2011ರವರೆಗೆ ಕಾಲಮಿತಿಯನ್ನು ನಿಗದಿಗೊಳಿಸಲಾಗಿದೆ. ಆನಂತರ ಸಂಪರ್ಕದಲ್ಲಿರುವ ಅಕ್ರಮ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ನಿಲುಗಡೆಗೊಳಿಸಿ ಕಾನೂನಿನ ಪ್ರಕಾರ ಕ್ರಮ ಜರುಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ: FD 748 EXP-1/09 ದಿನಾಂಕ: 09–12–2009ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಪಿ.ಆರ್. 795

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಕಂದಾಯ ಸಚಿವಾಲಯ

ವಿಷಯ : ಶಬರಿಮಲೈ ದುರಂತದಲ್ಲಿ ಮೃತಪಟ್ಟವರ ಸಂಬಂಧಿಗಳಿಗೆ ಪರಿಹಾರ ನೀಡುವ ಬಗ್ಗೆ.

ಓದಲಾಗಿದೆ : ಮಾನ್ಯ ಮುಖ್ಯಮಂತ್ರಿಯವರ ಟಿಪ್ಪಣಿ ಸಂ:ಸಿಎಂ/6066/ಎಮ್‌ಐಎನ್/2011, ದಿನಾಂಕ: 15-02-2011

ಪ್ರಸ್ತಾವನೆ:

ಮೇಲೆ ಓದಲಾದ ಮಾನ್ಯ ಮುಖ್ಯಮಂತ್ರಿಯವರ ಟಿಪ್ಪಣಿಯಲ್ಲಿ ದಿನಾಂಕ: 13-01-2011 ರಂದು ಶಬರಿಮಲೈ ದುರಂತದಲ್ಲಿ ಮೃತಪಟ್ಟವರ ಹತ್ತಿರದ ಸಂಬಂಧಿಗಳಿಗೆ ಈಗಾಗಲೇ ಸರ್ಕಾರ ಘೋಷಿಸಿದ ಪರಿಹಾರ ರೂ. 1.00 ಲಕ್ಷಕ್ಕೆ ಬದಲಾಗಿ ರೂ. 2.00 ಲಕ್ಷಗಳನ್ನು ಮಂಜೂರು ಮಾಡುವಂತೆ ಆದೇಶಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ. ಆರ್‌ಡಿ 28 ಟಿಎನ್‌ಆರ್ 2011 (ಭಾಗ), ಬೆಂಗಳೂರು, ದಿನಾಂಕ 07-03-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ: 13-01-2011 ರಂದು ಶಬರಿಮಲೈ ದುರಂತದಲ್ಲಿ ಮೃತಪಟ್ಟವರ ಹತ್ತಿರದ ಸಂಬಂಧಿಗಳಿಗೆ ರೂ. 2.00 ಲಕ್ಷ (ರೂಪಾಯಿ ಎರಡು ಲಕ್ಷ ಮಾತ್ರ) ಗಳ ಪರಿಹಾರವನ್ನು ಮೈಸೂರು, ಧಾರವಾಡ, ಬಾಗಲಕೋಟೆ, ಉತ್ತರಕನ್ನಡ ಬಳ್ಳಾರಿ, ಕೋಲಾರ, ಬೆಂಗಳೂರು ನಗರ, ರಾಯಚೂರು, ಬೆಳಗಾವಿ, ಕೊಪ್ಪಳ ಮತ್ತು ಬಿಜಾಪುರ ಜಿಲ್ಲಾಧಿಕಾರಿಗಳು ತಮ್ಮಲ್ಲಿ ಲಭ್ಯವಿರುವ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಪಾವತಿಸಲು ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 231 ವೆಚ್ಚ-7/2011, ದಿನಾಂಕ: 01-03-2011 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ. ಗಂಗಾಧರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ

ವಿಪತ್ತು ನಿರ್ವಹಣೆ ಮತ್ತು ಸೇವೆಗಳು-2

ಪಿ.ಆರ್. 826

ಕಂದಾಯ ಸಚಿವಾಲಯ

ವಿಷಯ : GOI, UNDP, Disaster Risk Reduction (DRR), Project ಸಂಬಂಧಿಸಿದಂತೆ, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ನೇಮಕಾತಿಗಳನ್ನು ಮಾಡಲು HR Support ಪಡೆದ ಬಾಬ್ತು ಶುಲ್ಕ ಪಾವತಿಸುವ ವಿಚಾರ.

ಓದಲಾಗಿದೆ :
1) ಸಂ: CDF/2010-11, ದಿನಾಂಕ: 16-12-2010- Community Development Foundation, ಬೆಂಗಳೂರು ಇವರ ಪತ್ರ.
2) ಸಂ: 70/CDF/2010-11, ದಿನಾಂಕ: 17-12-2010- Community Development Foundation, ಬೆಂಗಳೂರು ಇವರ ಪತ್ರ.
3) ದಿನಾಂಕ: 23-12-2010ರ ಆರ್‌ಡಿ 24 ಇಟಿಸಿ, 2010ರ ಸರ್ಕಾರದ ಪತ್ರ.

ಪ್ರಸ್ತಾವನೆ:

GOI, UNDP, Disaster Risk Reduction (DRR), Project ಗೆ ಸಂಬಂಧಿಸಿದಂತೆ, ಜಿಲ್ಲಾ ಮಟ್ಟದಲ್ಲಿ District Project Officer, Capacity Building Officer ಮತ್ತು ರಾಜ್ಯ ಮಟ್ಟದಲ್ಲಿ. Civil/Structural Engineer, Capacity Building & Training Officer ಗಳ ನೇಮಕಾತಿಗೆ ಸಂಬಂಧಿಸಿದಂತೆ, Community Development Foundation, ಬೆಂಗಳೂರು ಈ ಸಂಸ್ಥೆಯಿಂದ HR Support ಪಡೆಯಲು ಮೇಲೆ ಓದಲಾದ ಕ್ರ.ಸಂ. (1)ರ ಪತ್ರದ ಪ್ರಸ್ತಾವನೆಯನ್ನು ಸರ್ಕಾರವು ಒಪ್ಪಿದ್ದು ಈ ಬಗ್ಗೆ ಮೇಲೆ ಓದಲಾದ ಕ್ರ.ಸಂ. (2) ರ ಪತ್ರದಲ್ಲಿ, ಸದರಿ ಸಂಸ್ಥೆಗೆ ಸರ್ಕಾರದ ಒಪ್ಪಿಗೆ ಸೂಚಿಸಿ ಪತ್ರ ಬರೆಯಲಾಗಿತ್ತು. ಇದರಂತೆ, HR Support ಒದಗಿಸಿದ ಬಾಬ್ತು ರೂ. 45,000/- ಶುಲ್ಕ ಪಾವತಿಸಲು Community Development Foundation, ಬೆಂಗಳೂರು ಇವರು ಸಲ್ಲಿಸಿರುವ ಬಿಲ್ಲನ್ನು ಸರ್ಕಾರವು ಪರಿಶೀಲಿಸಿದ್ದು, ಸದರಿ ಮೊಬಲಗನ್ನು ಪಾವತಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ: ಕಂಇ 24 ಇಟಿಸಿ 2010, (ಭಾಗ), ಬೆಂಗಳೂರು, ದಿನಾಂಕ 03-03-2011

ಮೇಲೆ ವಿವರಿಸಿರುವ ಸಂದರ್ಭಗಳಲ್ಲಿ GOI, UNDP, Disaster Risk Reduction (DRR), Project ಬಾಬ್ತು, ಜಿಲ್ಲಾ ಮಟ್ಟದಲ್ಲಿ District Project Officer, Capacity Building Officer ಮತ್ತು ರಾಜ್ಯ ಮಟ್ಟದಲ್ಲಿ Civil/Structural Engineer, Capacity Building & Training Officer ಗಳ ನೇಮಕಾತಿಗೆ ಸಂಬಂಧಿಸಿದಂತೆ, Community Development Foundation, ನಂ. 29/3, ತುಳಸಿ ರಾಮದಾಸ ಮಟ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು-560005 ಇವರಿಂದ HR Support ಪಡೆದಿದ್ದಕ್ಕಾಗಿ ಸದರಿ ಸಂಸ್ಥೆಗೆ ರೂ. 45,000/- (ರೂಪಾಯಿ ನಲವತ್ತೈದು ಸಾವಿರ ಮಾತ್ರ) ಮೊಬಲಗನ್ನು ಪಾವತಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

ಈ ಬಾಬ್ತು ಖರ್ಚನ್ನು ಯು.ಎನ್.ಡಿ.ಪಿ.ಯಿಂದ ಸದರಿ Projectಗಾಗಿ ಭಾರತ ಸರ್ಕಾರದಿಂದ ಬಿಡುಗಡೆಯಾಗಿರುವ ಮೊಬಲಗಿನಲ್ಲಿ ಭರಿಸತಕ್ಕದ್ದು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ. ಗಂಗಾಧರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ವಿ.ನಿ.&ಸೇ-2)

ಪಿ.ಆರ್. 827

DEPARTMENT OF PERSONNEL AND ADMINISTRATIVE REFORMS SECRETARIAT

Sub : Sanction of Advance increment to IAS officers.

Preamble :

Sri Ujjwal Kumar Ghosh and Smt Mehendale Dipti Dilip, IAS (Probationers). 2008 batch in their representations dated 23.10.2010 and 13.10.2010 respectively, have stated that they have passed all the prescribed departmental examinations and the Kannada Language examination. They have also furnished the details of various departmental examinations and Kannada Language examinations passed by them. They have also requested for grant of second increment in terms of rule 7 of IAS (Pay) Rules, 2007. The request of the officers have been examined in Government and following orders are issued.

Government Order No. : DPAR 614 SAS 2010, Bangalore, Dated : 25-01-2011

In the circumstances, explained in the preamble and in exercise of powers, conferred in rule 7 of IAS (Pay) Rules 2007, the State Government is pleased to release the second Annual increment in respect of Sri Ujjwal Kumar Ghosh and Smt. Mehendale Dipti Dilip, IAS (Probationers), 2008 batch.

By Order and in the name of the Governor of Karnataka

K.G. Anantha

Under Secretary to Government

DP&AR (Services-1)

P.R. 290

COMMERCE AND INDUSTRIES SECRETARIAT

CORRIGENDUM

No. CI/153/SPI/2010, Bangalore, Dated : 17-03-2011

Sub : Approval to the Project Proposal of M/s. Hindustan Coca-Cola Beverages Pvt. Ltd., to establish an "Integrated Logistics Center" in 7 acres of land along with already approved project at Bidadi Industrial Area, Phase-I, Ramanagara District.

Read: 1. Govt. Order No. CI 153 SPI 2010, dated: 27.04.2010.

2. Corrigendum No. CI 153 SPI 2010, dated: 23.07.2010.

3. Proceedings of the 24th State High Level Clearance Committee (SHLCC) Meeting held on 24.01.2011.

In the Govt. Order No CI 153 SPI 2010, dated: 27.04.2010, in the order portion, after the words. **"Aerated Soft Drinks, Fruit Juices & Packed Drinking Water unit"** the words **"with an Integrated Logistics Center in 7 acres of land"** be inserted.

Other details, terms and conditions of G.O. referred above at (1) & (2) remain the same.

By Order and in the name of the Governor of Karnataka

A.V. Srinivasa Dikshit

Desk Officer (Technical Cell)

Commerce & Industries Department

P.R. 824

ಕಂದಾಯ ಸಚಿವಾಲಯ

ವಿಷಯ : ಹೊರರಾಜ್ಯದ ಛತ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ಮಂಜೂರು ಮಾಡುವ ಕುರಿತು..

ಓದಲಾಗಿದೆ : 1. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ: ಎಡಿಎಂ 6 ಸಿಆರ್ 14/09–10 ದಿನಾಂಕ 15.9.2009, 22.3.2010, 25.9.2010.

2. ಸರ್ಕಾರದ ಆದೇಶ ಸಂಖ್ಯೆ: ಕಂಇ 159 ಮುಸೇವಿ 2009, ದಿ: 19.2.11

ಪ್ರಸ್ತಾವನೆ:

ಕರ್ನಾಟಕ ರಾಜ್ಯ ಛತ್ರ, ತಿರುಮಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವೇತನಶ್ರೇಣಿ ಪಡೆಯುತ್ತಿರುವ ಹಾಗೂ ಪಿಂಚಣಿಯುಕ್ತ ನೌಕರರಿಗೆ ಮನೆ ಬಾಡಿಗೆ ಭತ್ಯೆ ಪಾವತಿ ಮಾಡದೆ ಇದ್ದುದರಿಂದ ತಿರುಮಲದ ಕರ್ನಾಟಕ ರಾಜ್ಯ ಛತ್ರದಲ್ಲಿ ಲಭ್ಯವಿದ್ದ ವಸತಿಗೃಹಗಳನ್ನು ನೌಕರರಿಗೆ ವಾಸಕ್ಕಾಗಿ ನೀಡಲಾಗಿದ್ದು, ಉಳಿದಂತೆ ಖಾಲಿ ಸ್ಥಳದಲ್ಲಿ ಕೆಲವು ನೌಕರರು ಸುಮಾರು 20–25 ವರ್ಷಗಳ ಹಿಂದೆಯೇ ತಮ್ಮ ಸ್ವಂತ ವೆಚ್ಚದಲ್ಲಿ ತಾತ್ಕಾಲಿಕ ಕುಟೀರಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆಂದು, ಪ್ರಸ್ತುತ ಕರ್ನಾಟಕ ರಾಜ್ಯ ಛತ್ರದ ವಶದಲ್ಲಿದ್ದ 27 ಸೆಂಟ್ಸ್ ವಿಸ್ತೀರ್ಣದ ಜಮೀನನ್ನು ಟಿ.ಟಿ.ಡಿ. ಯವರಿಗೆ ರಸ್ತೆ ಅಗಲೀಕರಣ ಹಾಗೂ ಗ್ಯಾಲರಿ ನಿರ್ಮಾಣಕ್ಕಾಗಿ ಹಸ್ತಾಂತರಿಸಿರುವ ಹಿನ್ನೆಲೆಯಲ್ಲಿ ಶ್ರೀ ಕೃಷ್ಣರಾಜೇಂದ್ರ ಛತ್ರ ಹಾಗೂ ನೌಕರರ ತಾತ್ಕಾಲಿಕ ಕುಟೀರಗಳನ್ನು ಒದಗಿಸಲು ವಸತಿಗೃಹಗಳು ಲಭ್ಯವಿರುವುದಿಲ್ಲವೆಂದು, ಅಲ್ಲದೆ ವಸತಿ ಗೃಹಗಳನ್ನು ನಿರ್ಮಿಸಲು ಸಾಕಷ್ಟು ಹಣ ವ್ಯಯವಾಗುವುದರಿಂದ ರಾಜ್ಯ ಛತ್ರದಲ್ಲಿ ತಾತ್ಕಾಲಿಕ ಕುಟೀರಗಳನ್ನು ಕಳೆದುಕೊಂಡ ನೌಕರರಿಗೆ ಮನೆಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆಗಳನ್ನು ಆಂಧ್ರಪ್ರದೇಶದ ಸರ್ಕಾರದವರು ತಿರುಪತಿ ನಗರಕ್ಕೆ ನಿಗದಿಪಡಿಸಿರುವ ದರದಲ್ಲಿ ಪಾವತಿಸುವುದು ಸೂಕ್ತವೆಂದು, ಅದರಂತೆ ಅವುಗಳನ್ನು ಮಂಜೂರು ಮಾಡುವಂತೆ ರಾಜ್ಯ ಛತ್ರದ ವಿಶೇಷಾಧಿಕಾರಿಗಳು ಕೋರಿರುತ್ತಾರೆಂದು ತಿಳಿಸುತ್ತಾ, ಕರ್ನಾಟಕ ರಾಜ್ಯ ಛತ್ರ ತಿರುಮಲದಲ್ಲಿ

ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಮಾತ್ರ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ನೀಡಿದಲ್ಲಿ ಉಳಿದ ಹೊರ ರಾಜ್ಯದ ಛತ್ರಗಳಲ್ಲಿ, ಅಂದರೆ ವಾರಣಾಸಿ, ಶ್ರೀಶೈಲಂ ಮತ್ತು ಮಂತ್ರಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಛತ್ರದ ನೌಕರರಿಗೂ ಸಹ ಈ ಸೌಲಭ್ಯ ನೀಡಬೇಕಾಗಿರುತ್ತದೆಯೆಂದು, ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಎಸ್‌ಆರ್‌ಐ 2009 ದಿ: 2.3.2009ರಂತೆ ಜನಸಂಖ್ಯೆಗೆ ಅನುಗುಣವಾಗಿ ಮೂಲ ವೇತನದ ಪ್ರಕಾರ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯ ದರಗಳು ಹಾಗೂ ವಾರ್ಷಿಕ ತಗಲುವ ಅಂದಾಜು ವೆಚ್ಚದ ವಿವರಗಳನ್ನು ಕೆಳಕಂಡಂತೆ ನೀಡುತ್ತಾ, ಹೊರ ರಾಜ್ಯ ಛತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಛತ್ರದ ನೌಕರರಿಗೆ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಮಂಜೂರು ಮಾಡುವಂತೆ ಧಾರ್ಮಿಕ ದತ್ತಿ ಆಯುಕ್ತರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕ್ರ.ಸಂ.	ನಗರ/ಪಟ್ಟಣಗಳ ವರ್ಗೀಕರಣ	ಮನೆ ಬಾಡಿಗೆ ಭತ್ಯೆ	ನಗರ ಪರಿಹಾರ ಭತ್ಯೆ	ವೆಚ್ಚದ ವಿವರಗಳು (ರೂ.ಗಳಲ್ಲಿ)
1	ತಿರುಮಲ–ಬಿ1	15%	ರೂ. 80	6,22,440/–
2	ವಾರಣಾಸಿ–ಬಿ1	15%	ರೂ. 80	18,300/–
3	ಶ್ರೀ ಶೈಲಂ–ಡಿ	6%	–	4,608/–
4	ಮಂತ್ರಾಲಯ–ಡಿ	6%	–	66,048/–

ಧಾರ್ಮಿಕ ದತ್ತಿ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ರಾಜ್ಯ ಛತ್ರ, ತಿರುಪತಿ–ತಿರುಮಲದಲ್ಲಿ ಸರ್ಕಾರಿ ವೇತನಶ್ರೇಣಿ ಪಡೆದು ಕೆಲಸ ನಿರ್ವಹಿಸುತ್ತಿರುವ ಪಿಂಚಣಿಯುತ/ಪಿಂಚಣಿರಹಿತ ನೌಕರರಿಗೆ ಮಾತ್ರ ಮೂಲ ವೇತನದ ಶೇಕಡ 15ರಂತೆ ಮನೆ ಬಾಡಿಗೆ ಭತ್ಯೆ ಮತ್ತು ರೂ. 80/–ರಂತೆ ನಗರ ಪರಿಹಾರ ಭತ್ಯೆಯನ್ನು ಸೆಪ್ಟೆಂಬರ್ 2009ನೇ ಸಾಲಿನಿಂದ ಅನ್ವಯವಾಗುವಂತೆ ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ.

ಕರ್ನಾಟಕ ರಾಜ್ಯ ಛತ್ರ, ತಿರುಪತಿ ತಿರುಮಲದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ಮಂಜೂರು ಮಾಡಿದಂತೆ ಮಂತ್ರಾಲಯ, ವಾರಣಾಸಿ, ಮತ್ತು ಶ್ರೀಶೈಲಂನ ಕರ್ನಾಟಕ ರಾಜ್ಯ ಛತ್ರದಲ್ಲಿ ಸರ್ಕಾರಿ ವೇತನಶ್ರೇಣಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೂ ಸಹ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ಮಂಜೂರು ಮಾಡಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶದ ಸಂಖ್ಯೆ: ಕಂಇ 159 ಮುಸೇವಿ 2009, ಬೆಂಗಳೂರು, ದಿನಾಂಕ: 15.03.2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಛತ್ರ ವಾರಣಾಸಿ, 'ಶ್ರೀಶೈಲಂ ಮತ್ತು ಮಂತ್ರಾಲಯದಲ್ಲಿ ಸರ್ಕಾರಿ ವೇತನಶ್ರೇಣಿ ಪಡೆದು ಕೆಲಸ ನಿರ್ವಹಿಸುತ್ತಿರುವ ಪಿಂಚಣಿರಹಿತ ನೌಕರರಿಗೆ ಈ ಕೆಳಕಂಡಂತೆ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಸೆಪ್ಟೆಂಬರ್ 2009ನೇ ಸಾಲಿನಿಂದ ಅನ್ವಯವಾಗುವಂತೆ ಮಂಜೂರು ಮಾಡಿ ಆದೇಶಿಸಿದೆ.

ಕ್ರ.ಸಂ.	ನಗರ/ಪಟ್ಟಣಗಳ ವರ್ಗೀಕರಣ	ಮನೆ ಬಾಡಿಗೆ ಭತ್ಯೆ	ನಗರ ಪರಿಹಾರ ಭತ್ಯೆ
1	ವಾರಣಾಸಿ–ಬಿ1	15%	ರೂ. 80
2	ಶ್ರೀ ಶೈಲಂ–ಡಿ	6%	ಇಲ್ಲ
3	ಮಂತ್ರಾಲಯ–ಡಿ	6%	ಇಲ್ಲ

ಮೇಲ್ಕಂಡ ವೆಚ್ಚವನ್ನು ಆಯಾಯಾ ಛತ್ರದ ನಿಧಿಯಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 828

ಎಲ್.ಎಸ್. ಶ್ರೀಕಂಠಬಾಬು
ಪೀಠಾಧಿಕಾರಿ
ಕಂದಾಯ ಇಲಾಖೆ (ಮುಜರಾಯಿ)

DEPARTMENT OF PERSONNEL AND ADMINISTRATIVE REFORMS SECRETARIAT

CORRIGENDUM

No. DPAR 179 SIS 2010, Bangalore, Dated 18-03-2011

In the Government order of even number dated 26.10.2010 r/w Government Order dated 20.12.2010 relating to deputation of officers for Common Purpose Leadership Training Programme, Meridian 2010, the words occurring in the second para of Government order dated 26.10.2010 viz., ***" expenses towards course fee, boarding and lodging charges will be borne by the DOPT. Government of India"*** shall be substituted by the words ***"expenses towards course fee, boarding and lodging charges will be met out from the funds under the head of account "2070-00-003-4-01-015 (Non-plan)".***

By Order and in the name of the Governor of Karnataka

P.R. 829

Ashok. P. Atre
Under Secretary to Government (I/C)
DPAR (Services-1)

ಯುವಜನ ಸೇವಾ ಸಚಿವಾಲಯ

ವಿಷಯ : ಶ್ರೀ ಬಿ.ಎಂ. ಸುರೇಶ್, ನಿರ್ದೇಶಕರು ಹಾಗೂ ಕ್ಯಾಪ್ಟನ್ ಎನ್. ಜೈಪ್ರಕಾಶ್, ಮುಖ್ಯ ವಿಮಾನ ಬೋಧಕರು, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು ಅವರುಗಳಿಗೆ ನವದೆಹಲಿಗೆ ಪ್ರಯಾಣ ಮಾಡಲು ಅನುಮತಿ ನೀಡುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ಯುಸೇಇ 12 ಯುರಾಸೇ 2011, ಬೆಂಗಳೂರು, ದಿನಾಂಕ: 17.3.2011

ನವದೆಹಲಿಯ ಡೆಲ್ಲಿ ಫ್ಲೈಯಿಂಗ್ ಕ್ಲಬ್ ಆವರಣದಲ್ಲಿ ದಿನಾಂಕ: 18.03.2011 ರಂದು ನಡೆಯುವ ಏರೋ ಕ್ಲಬ್ ಆಫ್ ಇಂಡಿಯಾದ ಕೌನ್ಸಿಲ್ ಆಫ್ ಮ್ಯಾನೇಜ್‌ಮೆಂಟ್ ಸಭೆಯಲ್ಲಿ ಭಾಗವಹಿಸುವ ಸಲುವಾಗಿ ದಿನಾಂಕ: 18.03.2011ರಂದು ಬೆಂಗಳೂರು–ನವದೆಹಲಿ–ಬೆಂಗಳೂರು ನಡುವೆ ಪ್ರಯಾಣ ಕೈಗೊಳ್ಳಲು ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು, ಬೆಂಗಳೂರು ಇಲ್ಲಿನ ಈ ಕೆಳಕಂಡ ಅಧಿಕಾರಿಗಳಿಗೆ ಈ ಮೂಲಕ ಸರ್ಕಾರದ ಅನುಮತಿ ನೀಡಲಾಗಿದೆ.

1) ಶ್ರೀ ಬಿ.ಎನ್. ಸುರೇಶ್, ನಿರ್ದೇಶಕರು,
2) ಕ್ಯಾಪ್ಟನ್ ಎನ್. ಜೈಪ್ರಕಾಶ್, ಮುಖ್ಯ ವಿಮಾನ ಬೋಧಕರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಯುವಜನ ಸೇವಾ ಇಲಾಖೆ

ಪಿ.ಆರ್. 830

DEPARTMENT OF INFORMATION TECHNOLOGY, BIO TECHNOLOGY AND SCIENCE AND TECHNOLOGY SECRETARIAT

Sub : Administrative approval for establishment of Incubation Centre and Common Instrumentation Facility in the Bio-tech Park, Electronic City, Bangalore.

Read: 1. Ministry of Science and Technology Department of biotechnology Government of India Sanction order No. BT/012/NBDB/KS/2004 dt: 28-03-2005.

2. Letter No: KBITS/IPO/SCP/2010-11, dt: 13-12-2010, 12-01-2011 and 01-02-2011 of Managing director KBITS, Bangalore.

3. Letter No: GMPI RGRHCL 08 TEC 06 2010 dt: 07-12-2010 of General Manager (PI) Rajiv Gandhi Rural Housing Corporation Bangalore.

Preamble :

In the millennium Biotech policy, Government of Karnataka proposed setting up of the Biotech Park in Bangalore to meet the global, Biotech standards thereby fostering the growth and development of the Biotech sector in the State. Accordingly, the Department of IT, BT and S & T has been taken steps for Implementing the Biotech Park Project in Bangalore in an extent of 86 acres of land in Electronic City, Bangalore, which has been acquired by KIADB and is in possession of KBITS.

The Biotech Park project is being implemented in 3 parts as detailed below:-

Part-A-Academic block, comprising of institute of Bioinformatics and Applied Biotechnology [IBAB] and Centre for Human Genetics [CHG].

Part-B-Biotech Incubation Centre [BIC] and Common Instrumentation Facility [CIF]

Part-C-Biotechnology Industry cluster comprising of independent private business units with common effluent treatment plant.

Part-A of the Biotech Park is fully operational and IBAB and CHG Institutes are functioning. Apart from it, Hostel and Dining facilities has also been provided to IBAB students.

Now, the M.D. KBITS in their letter read (2) above, has proposes to take up the construction of Incubation Centre and Common instrumentation Facility in an extent of 5 acres of land in the Bio-tech Park, Electronic City, Bangalore.

The proposed Incubation Centre would consist of Research Laboratories, Multipurpose and specialized pilot plant etc., The Common Instrumentation Facility would house instruments with advanced technology to meet the requrements of the Biotech Industry.

Government of India vide their order No. BT/012/NBDB/KS-2004, dated: 28.3.2005 read at (1) above, have sanctioned a grant of Rs. 1445.45 lakhs and has released an amount of Rs. 1113.00 lakhs for purchase of instruments for the Common Instrumentation Facility.

In the Project Managing Committee [PMC] meeting held on 24.9.2009, it was decided to separate the incubation Centre and Instrumentation Facility from the tendering process for the private cluster and instead develop the same by providing funds from the State Government. Accordingly, tentative estimates and drawings have got prepared by M/s. Rajiv Gandhi Rural Housing Corporation Limited, Government of Karnataka Enterprise.

The General Manager (PI) M/s. Rajiv Gandhi Rural Housing Coperation Limited, in their letter read at (3) above, has submitted the tentative estimate for Rs. 860 lakhs, for construction of Incubation Centre and Common Instrumentation Facility, and has sought the administrative approval of the Government for the said project.

The proposal has been examined, hence the order.

Government Order No. ITD 01 MDA 2010, Bangalore Dated 15-03-2011

In the circumstances explained above, Government are pleased to accord Administrative approval for construction of Incubation Centre and Common Instrumentation Facility in Biotech park, Electronic City, Bangalore at an estimated cost of Rs. 860.00 lakhs [Rupees Eight Sixty Lakhs only]

By Order and in the name of the Governor of Karnataka
K. Boralingaiah
Under Secretary to Government, (I/C)
Department of Information Technology, Bio Technology and Science & Technology

P.R. 831

ಒಳಾಡಳಿತ ಸಚಿವಾಲಯ

ವಿಷಯ : ಕಾರಾಗೃಹಗಳಲ್ಲಿನ ಬಂದಿಗಳ ಕೂಲಿ ಹಣವನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 37 ಪಿಆರ್‌ಎ 96 ದಿನಾಂಕ: 22–1–1999.
2) ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 37 ಪಿಆರ್‌ಎ 96 ದಿನಾಂಕ: 10.9.2004
3) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರ ಪತ್ರ ಸಂಖ್ಯೆ: ಎಡಿಡಿ೦4: ಸಿಆರ್–107/2008–09, ದಿನಾಂಕ 19.6.2008.
4) ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 298 ಪಿಆರ್‌ಎ 2008 ದಿನಾಂಕ: 5–9–2009.
5) ಕೂಲಿ ನಿಗದಿ ಮಂಡಳಿಯ ದಿನಾಂಕ: 5–1–2010ರ ಸಭೆಯ ನಡವಳಿ.
6) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರ ಪತ್ರ ಸಂಖ್ಯೆ: ಎಡಿಎ೦4:ಸಿಆರ್–107/2010–11, ದಿನಾಂಕ 22–5–2010 ಮತ್ತು 29.7.2010.

ಪ್ರಸ್ತಾವನೆ:

ರಾಜ್ಯದ ಕಾರಾಗೃಹದಲ್ಲಿ ದಾಖಲಾಗಿರುವ ಬಂದಿಗಳಿಗೆ, ಅವರು ಮಾಡುವ ಕೆಲಸಗಳಿಗನುಗುಣವಾಗಿ ಕೂಲಿಯನ್ನು ನೀಡಲಾಗುತ್ತಿದೆ. ಅದರಂತೆ, ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ, ಕೆಳಕಂಡಂತೆ ಕೂಲಿ ದರವನ್ನು ಮಧ್ಯಂತರವಾಗಿ ನಿಗದಿಪಡಿಸಲಾಗಿತ್ತು. ಹೀಗೆ ನಿಗದಿಪಡಿಸಿದ ಕೂಲಿ ದರಗಳಲ್ಲಿ ಬಂದಿಗಳಿಗೆ ವೆಚ್ಚ ಮಾಡುವ ಆಹಾರ ಮತ್ತು ಬಟ್ಟೆಯ ವೆಚ್ಚದ ಬಾಬ್ತು ರೂ. 25.00 ಗಳನ್ನು ಕಡಿತಗೊಳಿಸಿ ಆದೇಶಿಸಲಾಗಿತ್ತು.

ಕ್ರ.ಸಂ.	ಬಂದಿಗಳ ವರ್ಗ	ನಿಗದಿಪಡಿಸಿದ ಕೂಲಿ ದರ	ಊಟ, ಬಟ್ಟೆ ವೆಚ್ಚ	ನಗದು ಪಾವತಿ
1	ತರಬೇತಿ ಕೆಲಸಗಾರ ಬಂದಿ (Unskilled)	ರೂ. 35.00	ರೂ. 25.00	ರೂ. 10.00
2	ಕುಶಲ ಕೆಲಸಗಾರ ಬಂದಿ (Skilled)	ರೂ. 40.00	ರೂ. 25.00	ರೂ. 15.00
3	ಹೆಚ್ಚಿನ ಕೂಲಿ ಕೆಲಸಗಾರ ಬಂದಿ (Highly skilled)	ರೂ. 45.00	ರೂ. 25.00	ರೂ. 20.00

ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ, ಮೇಲೆ ತಿಳಿಸಿದಂತೆ ಮಧ್ಯಂತರವಾಗಿ ನಿಗದಿಪಡಿಸಿದ ಕೂಲಿ ದರವನ್ನೇ ಖಾಯಂಗೊಳಿಸಿ ಮುಂದುವರೆಸಲು ಸರ್ಕಾರವು ಮಂಜೂರಾತಿಯನ್ನು ನೀಡಲಾಗಿತ್ತು

ನಿಗದಿಪಡಿಸಿದ ಕೂಲಿ ದರವನ್ನು ಹೆಚ್ಚಿಸಬೇಕೆಂದು ಬಂದಿಗಳಿಂದ ಬಂದ ಕೋರಿಕೆಗಳ ಹಿನ್ನೆಲೆಯಲ್ಲಿ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಸರ್ಕಾರಕ್ಕೆ ಬರೆದ ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ನಿಗದಿಪಡಿಸಲಾದ ಕೂಲಿಯನ್ನು ಮೂರು ವರ್ಷಗಳ ನಂತರ ಪರಿಷ್ಕರಿಸಬೇಕಾಗಿರುತ್ತದೆ. ಈ ಬಗ್ಗೆ ಅಭ್ಯಸಿಸಿ ವರದಿ/ಶಿಫಾರಸ್ಸು ನೀಡಲು ಅನುಕೂಲವಾಗುವಂತೆ ಈ ಕೆಳಕಂಡಂತೆ ಕೂಲಿ ನಿಗದಿ ಮಂಡಳಿ (Wage Fixation Body) ಯನ್ನು ರಚಿಸಬೇಕೆಂದು ಕೋರಿದ್ದರು.

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಬೆಂಗಳೂರು. : ಅಧ್ಯಕ್ಷರು
2. ಸರ್ಕಾರದ ಉಪ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಬೆಂಗಳೂರು : ಸದಸ್ಯರು
3. ಮುಖ್ಯ ಅಧೀಕ್ಷಕರು, ಬೆಂಗಳೂರು ಕೇಂದ್ರ ಕಾರಾಗೃಹ, ಬೆಂಗಳೂರು : ಸದಸ್ಯರು
4. ಕಾರಾಗೃಹಗಳ ಉಪ ಮಹಾನಿರೀಕ್ಷಕರು, ಕೇಂದ್ರ ಕಛೇರಿ, ಬೆಂಗಳೂರು : ಸದಸ್ಯ ಕಾರ್ಯದರ್ಶಿ

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರವರ ಕೋರಿಕೆಯನ್ನು ಪರಿಶೀಲಿಸಿದ ಸರ್ಕಾರವು, ಮೇಲೆ (4)ರಲ್ಲಿ ಓದಲಾದ ಆದೇಶದಲ್ಲಿ, ಕಾರಾಗೃಹಗಳಲ್ಲಿರುವ ಬಂದಿಗಳು ಮಾಡುವ ಕೆಲಸಕ್ಕೆ **"ಸಮಾನ ಕೆಲಸಕ್ಕೆ ಸಮಾನ ಕೂಲಿ"** ಯಂತೆ ಈಗಿರುವ ಕೂಲಿಯನ್ನು ಪರಿಷ್ಕರಿಸಲು, ಈ ಬಗ್ಗೆ ಅಭ್ಯಸಿಸಿ ಸರ್ಕಾರಕ್ಕೆ ವರದಿ/ಶಿಫಾರಸ್ಸು ನೀಡಲು ಅನುವಾಗುವಂತೆ ಸರ್ಕಾರವು, ಈ ಕೆಳಕಂಡಂತೆ ಕೂಲಿ ನಿಗದಿ ಮಂಡಳಿ (Wage Fixation Body) ಯನ್ನು ರಚಿಸಿತ್ತು.

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬೆಂಗಳೂರು : ಅಧ್ಯಕ್ಷರು
2. ಸರ್ಕಾರದ ಜಂಟಿ ಕಾರ್ಯದರ್ಶಿಗಳು, (ಕಾನೂನು ಮತ್ತು ಸುವ್ಯವಸ್ಥೆ), ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು : ಸದಸ್ಯರು
3. ವಿಶೇಷಾಧಿಕಾರಿಗಳು, (ವಿಶ್ರಾಂತಿ ವೇತನ), ಆರ್ಥಿಕ ಇಲಾಖೆ : ಸದಸ್ಯರು

ಬಹುಮಹಡಿ ಕಟ್ಟಡ, ಬೆಂಗಳೂರು

4. ಸರ್ಕಾರದ ಉಪ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ವಿಕಾಸಸೌಧ, ಬೆಂಗಳೂರು : ಸದಸ್ಯರು
5. ಕಾರಾಗೃಹಗಳ ಉಪ ಮಹಾನಿರೀಕ್ಷಕರು, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರ ಕಛೇರಿ, ಬೆಂಗಳೂರು : ಸದಸ್ಯರು
6. ಮುಖ್ಯ ಅಧೀಕ್ಷಕರು, ಬೆಂಗಳೂರು ಕೇಂದ್ರ ಕಾರಾಗೃಹ, ಬೆಂಗಳೂರು : ಸದಸ್ಯ ಕಾರ್ಯದರ್ಶಿ

ಮುಂದುವರೆದು, ರಚಿಸಲ್ಪಟ್ಟ ಮಂಡಳಿಯು ಕನಿಷ್ಟ ನಿಗದಿ ಕಾಯ್ದೆ ಮುಂತಾದವುಗಳನ್ನು ಹಾಗೂ ಬಂದಿಗಳು ಮಾಡುವ ಕೆಲಸಕ್ಕೆ ಸೂಕ್ತವಾದ ಕೂಲಿ ದರಗಳನ್ನು ಪರಿಶೀಲಿಸಬೇಕೆಂದೂ ಹಾಗೂ ಈ ವಿಚಾರದಲ್ಲಿ ಗೌ:ನ್ಯಾಯಾಲಯಗಳು ಮತ್ತು ರಾಷ್ಟ್ರೀಯ/ರಾಜ್ಯ ಮಾನವ ಹಕ್ಕುಗಳ ಆಯೋಗವು ನೀಡುವ ನಿರ್ದೇಶನ/ಶಿಫಾರಸ್ಸುಗಳನ್ನು ಗಣನೆಗೆ ತೆಗೆದುಕೊಂಡು ಸೂಕ್ತ ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಆದೇಶಿಸಲಾಗಿತ್ತು.

ಕೂಲಿ ನಿಗದಿ ಮಂಡಳಿಯು ಬೆಂಗಳೂರಿನಲ್ಲಿರುವ ಕಾರ್ಮಿಕ ಆಯುಕ್ತರ ಕಛೇರಿಯಲ್ಲಿ ದಿನಾಂಕ: 5–1–2010 ರಂದು ಸಭೆ ನಡೆಸಿದೆ. ಈ ಸಭೆಯಲ್ಲಿ ಕಾರಾಗೃಹಗಳಲ್ಲಿನ ಬಂದಿಗಳಿಗೆ ಸಮಾನ ಕೆಲಸಕ್ಕೆ ಸಮಾನ ಕೂಲಿ ದರ ನಿಗದಿಪಡಿಸುವ ಬಗ್ಗೆ ಸಮಗ್ರವಾಗಿ ಚರ್ಚಿಸಿ, ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಈ ಕೆಳಗಿನ ಶಿಫಾರಸ್ಸುಗಳನ್ನು ಮಾಡಿರುತ್ತದೆ (ಉಲ್ಲೇಖ 5).

1) ಹೊರಗಡೆ ವಿವಿಧ ಕೆಲಸಗಳಿಗೆ ನಿಗದಿಪಡಿಸಿರುವ ಕನಿಷ್ಟ ಕೂಲಿಯನ್ನು ಪರಿಗಣಿಸಿ ಕರ್ನಾಟಕ ರಾಜ್ಯ ಕಾರಾಗೃಹಗಳಲ್ಲಿನ ಬಂದಿಗಳಿಗೆ ಅದರಲ್ಲಿ ಸ್ವಲ್ಪ ಮಟ್ಟಿಗೆ ಕಡಿತಗೊಳಿಸಿ ಈ ಕೆಳಗಿನಂತೆ ಪರಿಷ್ಕೃತ ಕೂಲಿ ನಿಗದಿಪಡಿಸಬಹುದಾಗಿದೆ.

ಕ್ರ.ಸಂ.	ಬಂದಿಗಳ ವರ್ಗ	ನಿಗದಿಪಡಿಸಲು ಶಿಫಾರಸ್ಸು ಮಾಡಿದ ದರ	ಊಟ, ಬಟ್ಟೆ ವೆಚ್ಚ	ನಗದು ಪಾವತಿ
1	ತರಬೇತಿ ಕೆಲಸಗಾರ ಬಂದಿ (Unskilled)	ರೂ. 70.00	ರೂ. 40.00	ರೂ. 30.00
2	ಕುಶಲ ಕೆಲಸಗಾರ ಬಂದಿ (Skilled)	ರೂ. 80.00	ರೂ. 40.00	ರೂ. 40.00
3	ಹೆಚ್ಚಿನ ಕೂಲಿ ಕೆಲಸಗಾರ ಬಂದಿ (Highly skilled)	ರೂ. 90.00	ರೂ. 40.00	ರೂ. 50.00

2) ಈ ಮೇಲಿನಂತೆ ನಿಗದಿಪಡಿಸಿದ ಕೂಲಿಗೆ ಬಂದಿಯು ಮಾಡುವ 08 ಗಂಟೆಗಳ ಕೆಲಸ ಅನುಗುಣವಾಗಿ ಪಾವತಿಸಬಹುದಾಗಿದೆ.

3) ತರಬೇತಿ ಕೆಲಸಗಾರ ಬಂದಿಯು ಕನಿಷ್ಟ 06 ತಿಂಗಳ ತರಬೇತಿ ಪಡೆದ ನಂತರ ಕುಶಲ ಕೆಲಸಗಾರ ಬಂದಿಯ ವರ್ಗಕ್ಕೆ ಬಡ್ತಿ ನೀಡಬಹುದಾಗಿದೆ.

4) ಮಹಿಳಾ/ಪುರುಷ ಬಂದಿಗಳ ನಡುವೆ ಯಾವುದೇ ತಾರತಮ್ಯವಿಲ್ಲದೇ ಸಮಾನ ಕೆಲಸಕ್ಕೆ ಸಮಾನ ಕೂಲಿಯನ್ನು ನೀಡತಕ್ಕದ್ದು.

5) ಈಗ ಶಿಫಾರಸ್ಸು ಮಾಡಿರುವ ಕೂಲಿ ಹಣದ ದರವು ಮೂರು ವರ್ಷದವರೆಗೆ ಮಾತ್ರ ಜಾರಿಯಲ್ಲಿರುತ್ತದೆ ಹಾಗೂ ನಂತರದ ಅವಧಿಗೆ ಪುನ: ಕೂಲಿ ಪರಿಷ್ಕರಣೆ ಮಾಡುವುದು ಸೂಕ್ತವೆನಿಸುತ್ತದೆ.

6) ತರಬೇತಿ, ಕುಶಲ ಹಾಗೂ ಅತಿಕುಶಲ ಬಂದಿಯನ್ನು ಅವರ ಕೆಲಸಕ್ಕನುಗುಣವಾಗಿ ವರ್ಗಾಯಿಸುವ ಅಧಿಕಾರವನ್ನು ಆಯಾ ಕಾರಾಗೃಹದ ಮುಖ್ಯಸ್ಥರ ವಿವೇಚನೆಗೆ ಬಿಡಬಹುದಾಗಿದೆ.

ಕೂಲಿ ನಿಗದಿ ಮಂಡಳಿಯ ಶಿಫಾರಸ್ಸುಗಳನ್ನು ಅನುಸರಿಸಿ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಸರ್ಕಾರಕ್ಕೆ ಕಳುಹಿಸಿದ ಮೇಲೆ (6)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ, ಕೂಲಿ ನಿಗದಿ ಮಂಡಳಿಯು, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಶಿಫಾರಸ್ಸನ್ನು ಗಣನೆಗೆ ತೆಗೆದುಕೊಂಡು, ದೇಶದ ವಿವಿಧ ರಾಜ್ಯದ ಕಾರಾಗೃಹಗಳಲ್ಲಿ ಬಂದಿಗಳಿಗೆ ನೀಡುತ್ತಿರುವ ಕೂಲಿ ಹಣದ ವಿವರವನ್ನು ಪರಿಶೀಲಿಸಿ, ಬಂದಿಗಳು ತಾವು ಗಳಿಸಿದ ಕೂಲಿ ಹಣದಲ್ಲಿ ಕೌಟುಂಬಿಕ ನಿರ್ವಹಣೆಗೆ ಹಾಗೂ ಗೌ:ನ್ಯಾಯಾಲಯದಲ್ಲಿ ವಿಧಿಸಿದ ದಂಡದ ಹಣ ಪಾವತಿಗೆ, ವೈಯಕ್ತಿಕ ಖರ್ಚುಗಳಿಗೆ ಬಳಸುತ್ತಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಹೊರಗಡೆ ವಿವಿಧ ಕೆಲಸಗಳಿಗೆ ನಿಗದಿಪಡಿಸಿರುವ ಕನಿಷ್ಟ ಕೂಲಿಯನ್ನು ಪರಿಗಣಿಸಿ, ಅದರಲ್ಲಿ ಸ್ವಲ್ಪ ಮಟ್ಟಿಗೆ ಕಡಿತಗೊಳಿಸಿ ಮಂಡಳಿಯು ಬಂದಿಗಳಿಗೆ ಕೂಲಿ ಹಣವನ್ನು ಪರಿಷ್ಕರಿಸಬಹುದೆಂದು ತಿಳಿಸಿ, ಪರಿಷ್ಕರಿಸುವ ಕೂಲಿ ದರವನ್ನು ಸೂಚಿಸಿದೆ.

ಕೂಲಿ ನಿಗದಿ ಮಂಡಳಿಯು ಶಿಫಾರಸ್ಸು ಮಾಡಿರುವ ದರದಂತೆ ಬಂದಿಗಳಿಗೆ ಕೂಲಿಯನ್ನು ಹೆಚ್ಚಿಸಿದರೆ, ಬಂದಿಗಳಿಗೆ ನೀಡುತ್ತಿರುವ ಕೂಲಿ ಹಣಕ್ಕಿಂತ ಸುಮಾರು ರೂ. 1,30,000.00 ಗಳ ವೆಚ್ಚವನ್ನು ವರ್ಷಕ್ಕೆ ಹೆಚ್ಚಿಗೆ ಭರಿಸಬೇಕಾಗಿರುತ್ತದೆ. ಇದರಲ್ಲಿ ಸರಾಸರಿ ಶೇ. 50% ರಷ್ಟು ನಿರ್ವಹಣೆಯ ಖರ್ಚಿನ ರೂಪದಲ್ಲಿ ಸರ್ಕಾರಕ್ಕೆ ಪುನ: ಜಮೆ ಆಗುತ್ತದೆ.

ಈ ಹಿನ್ನೆಲೆಯಲ್ಲಿ ಕೂಲಿ ನಿಗದಿ ಮಂಡಳಿ ಶಿಫಾರಸ್ಸುಗಳನ್ನು ಅನುಕೂಲಕರವಾಗಿ ಪರಿಗಣಿಸಿ, ಕೆಳಕಂಡಂತೆ ಬಂದಿಗಳ ಕೂಲಿ ದರವನ್ನು ಹೆಚ್ಚಿಸಿ ಆದೇಶ ಹೊರಡಿಸಬೇಕೆಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಕೋರಿರುತ್ತಾರೆ.

ಕ್ರ.ಸಂ.	ಬಂದಿಗಳ ವರ್ಗ	ಈಗ ಕೂಲಿ ನಿಗದಿ ಮಂಡಳಿಯು ಶಿಫಾರಸ್ಸು ಮಾಡಿದ ಕೂಲಿ ಹಣ		
		ಹೆಚ್ಚಿಗೆ ಮಾಡಬೇಕಾದ ಕೂಲಿ ದರ	ಊಟ, ಬಟ್ಟೆ ಖರ್ಚು	ನಗದು ಪಾವತಿ
1	ತರಬೇತಿ ಕೆಲಸಗಾರ ಬಂದಿ (Unskilled)	ರೂ. 70.00	ರೂ. 40.00	ರೂ. 30.00
2	ಕುಶಲ ಬಂದಿ (Skilled)	ರೂ. 80.00	ರೂ. 40.00	ರೂ. 40.00
3	ಹೆಚ್ಚಿನ ಕುಶಲ ಬಂದಿ (Highly skilled)	ರೂ. 90.00	ರೂ. 40.00	ರೂ. 50.00

ಕೂಲಿ ನಿಗದಿ ಮಂಡಳಿಯ ಶಿಫಾರಸ್ಸುಗಳನ್ನು ಹಾಗೂ ಸದರಿ ಶಿಫಾರಸ್ಸುಗಳನ್ನು ಆಧರಿಸಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 298 ಪಿಆರ್‌ಎ 2008, ಬೆಂಗಳೂರು, ದಿನಾಂಕ: 18.3.2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಕಾರಾಗೃಹಗಳಲ್ಲಿ ದಾಖಲಾಗಿರುವ ಬಂದಿಗಳಿಗೆ ಈ ಕೆಳಕಂಡಂತೆ ಕೂಲಿ ದರವನ್ನು ಹೆಚ್ಚಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನಿಗದಿಪಡಿಸಿ ಆದೇಶಿಸಿದೆ.

ಕ್ರಮಸಂ.	ಬಂದಿಗಳ ವರ್ಗ	ಈ ಹಿಂದೆ ಇದ್ದ ಕೂಲಿ ದರ			ಈಗ ಹೆಚ್ಚಿಸಿ ನಿಗದಿಪಡಿಸಿದ ಕೂಲಿ ದರ		
		ಕೂಲಿ ದರ ರೂ.	ಊಟ, ಬಟ್ಟೆ ಖರ್ಚು ರೂ.	ನಗದು ಪಾವತಿ ರೂ.	ಹೆಚ್ಚಿಸಿದ ಕೂಲಿ ದರ ರೂ.	ಊಟ, ಬಟ್ಟೆ ಖರ್ಚು ರೂ.	ನಗದು ಪಾವತಿ ರೂ.
1	ತರಬೇತಿ ಕೆಲಸಗಾರ ಬಂದಿ (Unskilled)	35.00	25.00	10.00	70.00	40.00	30.00
2	ಕುಶಲ ಬಂದಿ (Skilled)	40.00	25.00	15.00	80.00	40.00	40.00
3	ಹೆಚ್ಚಿನ ಕುಶಲ ಬಂದಿ (Highly skilled)	45.00	25.00	20.00	90.00	40.00	50.00

ಷರತ್ತುಗಳು

1. ಈ ಮೇಲಿನಂತೆ ನಿಗದಿಪಡಿಸಿದ ಕೂಲಿಗೆ ಬಂದಿಯು ಮಾಡುವ 08 ಗಂಟೆಗಳ ಕೆಲಸಕ್ಕೆ ಅನುಗುಣವಾಗಿ ಪಾವತಿಸತಕ್ಕದ್ದು.
2. ತರಬೇತಿ ಕೆಲಸಗಾರ ಬಂದಿ (Unskilled)ಯು ಕನಿಷ್ಠ 06 ತಿಂಗಳ ತರಬೇತಿ ಪಡೆದ ನಂತರ ಕುಶಲ ಕೆಲಸಗಾರ ಬಂದಿಯ (Skilled) ವರ್ಗಕ್ಕೆ ಪರಿಗಣಿಸತಕ್ಕದ್ದು.
3. ತರಬೇತಿ, ಕುಶಲ ಮತ್ತು ಅತಿಕುಶಲ ಬಂದಿಯನ್ನು ಅವರ ಕೆಲಸಕ್ಕೆ ಅನುಗುಣವಾಗಿ ವರ್ಗಾಯಿಸುವ ಅಧಿಕಾರವನ್ನು ಆಯಾ ಕಾರಾಗೃಹದ ಮುಖ್ಯಸ್ಥರ ವಿವೇಚನೆಗೆ ಸೇರಿರತಕ್ಕದ್ದು.
4. ಮಹಿಳಾ/ಪುರುಷ ಬಂದಿಗಳ ನಡುವೆ ಯಾವುದೇ ತಾರತಮ್ಯವಿಲ್ಲದೇ ಸಮಾನ ಕೆಲಸಕ್ಕೆ ಸಮಾನ ಕೂಲಿಯನ್ನು ನೀಡತಕ್ಕದ್ದು.
5. ಈಗ ಹೆಚ್ಚಿಸಿ ನಿಗದಿಪಡಿಸಲಾದ ಕೂಲಿ ದರವು ಮೂರು ವರ್ಷದವರೆಗೆ ಮಾತ್ರ ಜಾರಿಯಲ್ಲಿರತಕ್ಕದ್ದು.
6. ಬಂದಿಗಳಿಗೆ ಕೂಲಿ ಹಣವನ್ನು ಪಾವತಿಸುವ ವಿಚಾರದಲ್ಲಿ ಯಾವುದೇ ದೂರುಗಳು ಬಂದರೆ, ಅವುಗಳಿಗೆ ಆಯಾ ಕಾರಾಗೃಹದ ಮುಖ್ಯಸ್ಥರೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.
7. ಕೂಲಿ ಹಣವನ್ನು ಪಾವತಿಸುವ ಸಲುವಾಗಿ ಬಿಡುಗಡೆ ಮಾಡುವ ಅನುದಾನವನ್ನು ಆ ಕಾರ್ಯಕ್ಕಾಗಿಯೇ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಮತ್ತು ಯಾವುದೇ ಸಂದರ್ಭದಲ್ಲೂ ಅನುದಾನ ದುರುಪಯೋಗವಾಗತಕ್ಕದ್ದಲ್ಲ.
8. ಕೂಲಿ ಹಣವನ್ನು ಪಾವತಿಸಿದ ಬಗ್ಗೆ ವಿವರಗಳನ್ನು ಒಳಗೊಂಡ ವರದಿಯನ್ನು ಒಂದು ತಿಂಗಳಾದ ನಂತರ ಆ ಮುಂದಿನ ತಿಂಗಳ ಒಂದು ವಾರದೊಳಗೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರಿಗೆ ತಪ್ಪದೆ ಸಲ್ಲಿಸತಕ್ಕದ್ದು.
9. ಈ ಮೇಲಿನ ಷರತ್ತುಗಳನ್ನು ಆಯಾ ಕಾರಾಗೃಹದ ಮುಖ್ಯಸ್ಥರು ಪಾಲಿಸುತ್ತಿರುವರೇ? ಅಥವಾ ಇಲ್ಲವೇ? ಎಂಬುದನ್ನು ಪರಿಶೀಲಿಸುವ ಹಾಗೂ ಸೂಕ್ಷ್ಮ ಸೂಚನೆಗಳನ್ನು ನೀಡುವ ಅಧಿಕಾರವನ್ನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಹೊಂದಿರುತ್ತಾರೆ.
10. ಕೂಲಿ ಹಣವನ್ನು ಪಾವತಿಸಿದ ಅಂಕಿ ಅಂಶಗಳನ್ನು ಒಳಗೊಂಡ ವಿವರಗಳುಳ್ಳ ತನಿಖೆಯ ಪಟ್ಟಿಯನ್ನೊಳಗೊಂಡ ವರದಿಯನ್ನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಆರು ತಿಂಗಳಿಗೊಮ್ಮೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶದಿಂದ ಉಂಟಾಗಬಹುದಾದ ಹೆಚ್ಚುವರಿ ವೆಚ್ಚವನ್ನು ಲೆಕ್ಕಶೀರ್ಷಿಕೆ "2056–00–101–0–01–051 ಸಾಮಾನ್ಯ ವೆಚ್ಚಗಳು (ಯೋಜನೇತರ); "2056–00–101–0–00–234 ಪಥ್ಯಾಹಾರವೆಚ್ಚ (ಯೋಜನೇತರ)" ಹಾಗೂ "2056–00–102–0–00–015 ಪೂರಕ ವೆಚ್ಚಗಳು (ಯೋಜನೇತರ)" ಗಳಿಂದ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ: 10–7–1996 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಪಿ.ಆರ್. 832

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ "ಇಡಿಗಂಟು (ಗೌರವಧನ) ಪಾವತಿ" ಯೋಜನೆಯನ್ನು ಜಾರಿಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ : ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರ ಪತ್ರ ಸಂಖ್ಯೆ : ಡಿಡಬ್ಲ್ಯೂಸಿ/ಐಸಿಡಿ/ಎಎನ್‌ಜಿ–1/227/2009–10, ದಿನಾಂಕ : 26–4–2010 ಮತ್ತು 10–11–2010.

ಪ್ರಸ್ತಾವನೆ :

ರಾಜ್ಯದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು 1975 ರಲ್ಲಿ ಪ್ರಾರಂಭಗೊಂಡಿದ್ದು, ಇಲ್ಲಿಯವರೆಗೆ 60046 ಅಂಗನವಾಡಿ ಕೇಂದ್ರಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಪ್ರಸ್ತುತ 63342 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ 61126 ಅಂಗನವಾಡಿ ಕಾರ್ಯಕರ್ತೆಯರು, 3319 ಮಿನಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ 53793 ಅಂಗನವಾಡಿ ಸಹಾಯಕಿಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು/ ಸಹಾಯಕಿಯರ ಹುದ್ದೆಗಳು ಗೌರವಧನ ಸೇವೆಗೆ ಸೇರಿದ್ದು, ಇವರಿಗೆ ಕೇಂದ್ರ ಮತ್ತು ರಾಜ್ಯದ ವತಿಯಿಂದ ಮಾಹೆಯಾನ ಗೌರವಧನ ನೀಡಲಾಗುತ್ತಿದೆ. ಈ ಯೋಜನೆಯು ಕೇಂದ್ರ ಸರ್ಕಾರದ್ದಾಗಿದ್ದರೂ, ಅವರ ನಿವೃತ್ತಿ ವಯಸ್ಸು ನಿಗದಿಪಡಿಸುವಿಕೆ ಮತ್ತು ನಿವೃತ್ತಿ ಪರಿಹಾರ ಸೌಲಭ್ಯಗಳನ್ನು ನೀಡುವ ಕುರಿತು ಸಂಬಂಧಪಟ್ಟ ರಾಜ್ಯ ಸರ್ಕಾರವೇ ನಿರ್ಣಯಿಸಿಕೊಳ್ಳಬೇಕೆಂದು ಕೇಂದ್ರ ಸರ್ಕಾರವು ಸೂಚಿಸಿರುತ್ತದೆ.

2010–11ನೇ ಸಾಲಿನ ಆಯವ್ಯಯದಲ್ಲಿ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ "ಇಡಿಗಂಟು (ಗೌರವಧನ) ಪಾವತಿ ಯೋಜನೆ" ಯನ್ನು ಜಾರಿಗೊಳಿಸುವುದಾಗಿ ಘೋಷಿಸಿದ್ದು, 2010–11ನೇ ಸಾಲಿನಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಮಂಜೂರಾತಿ ನೀಡುವಂತೆ ಮೇಲೆ ಓದಲಾದ ಪತ್ರಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 119 ಐಸಿಡಿ 2010(1), ಬೆಂಗಳೂರು, ದಿನಾಂಕ : 18–3–2011

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, 2010–11ನೇ ಸಾಲಿನಲ್ಲಿ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ "ಇಡಿಗಂಟು (ಗೌರವಧನ) ಪಾವತಿ ಯೋಜನೆ" ಯನ್ನು ಕೆಳಕಂಡ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಯೋಜನೆಯ ಹೆಸರು	:	60 ವರ್ಷ ತುಂಬುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ "ಇಡಿಗಂಟು (ಗೌರವಧನ) ಪಾವತಿ ಯೋಜನೆ"
ಅರ್ಹತೆ	:	ದಿನಾಂಕ : 1–4–1955 ಕ್ಕೆ ಮೊದಲು ಹುಟ್ಟಿದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಈ ಯೋಜನೆಗೆ ಅರ್ಹರಾಗುತ್ತಾರೆ.
ಯೋಜನೆಯ ವಿವರ	:	60 ವರ್ಷ ತುಂಬುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಂದ ಯಾವುದೇ ಸೇವೆಯನ್ನು ಪಡೆಯಲಾಗುವುದಿಲ್ಲ. ಸಾಮಾಜಿಕ ಭದ್ರತೆ ದೃಷ್ಟಿಯಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 50,000/– ಹಾಗೂ ಸಹಾಯಕಿಯರಿಗೆ ರೂ. 30,000/– ಗಳವರೆಗೆ ಇಡಿಗಂಟನ್ನು ನೀಡಲಾಗುವುದು.
ಲೆಕ್ಕಶೀರ್ಷಿಕೆ	:	2235–02–102–0–53 (ಯೋಜನೆ) ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 31 ವೆಚ್ಚ–3/11 ದಿನಾಂಕ : 8–2–2011 ರನ್ವಯ ಮತ್ತು ದಿನಾಂಕ : 22–2–2011 ರಂದು ನಡೆದ ಸಚಿವ ಸಂಪುಟದ ನಿರ್ಣಯದನ್ವಯ (ಪ್ರಕರಣ ಸಂಖ್ಯೆ : ಸಿ/98/2011) ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎನ್. ಕೃಷ್ಣಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ–1

ಪಿ.ಆರ್. 866 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ವಂತಿಗೆ ಆಧಾರಿತ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ : ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರ ಪತ್ರ ಸಂಖ್ಯೆ : ಡಿಡಬ್ಲ್ಯೂಸಿ/ಐಸಿಡಿ/ ಎಎನ್‌ಜಿ–1/227/2009–10, ದಿನಾಂಕ : 26–4–2010 ಮತ್ತು 10–11–2010.

ಪ್ರಸ್ತಾವನೆ :

ರಾಜ್ಯದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು 1975ರಲ್ಲಿ ಪ್ರಾರಂಭಗೊಂಡಿದ್ದು, ಇಲ್ಲಿಯವರೆಗೆ 60046 ಅಂಗನವಾಡಿ ಕೇಂದ್ರಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಪ್ರಸ್ತುತ 63342 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ 61126 ಅಂಗನವಾಡಿ ಕಾರ್ಯಕರ್ತೆಯರು, 3319 ಮಿನಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ 53793 ಅಂಗನವಾಡಿ ಸಹಾಯಕಿಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು/ ಸಹಾಯಕಿಯರ ಹುದ್ದೆಗಳು ಗೌರವಧನ ಸೇವೆಗೆ ಸೇರಿದ್ದು, ಇವರಿಗೆ ಕೇಂದ್ರ ಮತ್ತು ರಾಜ್ಯದ ವತಿಯಿಂದ ಮಾಹೆಯಾನ ಗೌರವಧನ ನೀಡಲಾಗುತ್ತಿದೆ. ಈ ಯೋಜನೆಯು ಕೇಂದ್ರ ಸರ್ಕಾರದ್ದಾಗಿದ್ದರೂ, ಅವರ ನಿವೃತ್ತಿ ವಯಸ್ಸು ನಿಗದಿಪಡಿಸುವಿಕೆ ಮತ್ತು ನಿವೃತ್ತಿ ಪರಿಹಾರ ಸೌಲಭ್ಯಗಳನ್ನು ನೀಡುವ ಕುರಿತು ಸಂಬಂಧಪಟ್ಟ ರಾಜ್ಯ ಸರ್ಕಾರವೇ ನಿರ್ಣಯಿಸಿಕೊಳ್ಳಬೇಕೆಂದು ಕೇಂದ್ರ ಸರ್ಕಾರವು ಸೂಚಿಸಿರುತ್ತದೆ.

2010–11ನೇ ಸಾಲಿನ ಆಯವ್ಯಯದಲ್ಲಿ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ "ವಂತಿಗೆ ಆಧಾರಿತ ಪಿಂಚಣಿ ಯೋಜನೆ" ಯೋಜನೆಯನ್ನು ಜಾರಿಗೊಳಿಸುವುದಾಗಿ ಘೋಷಿಸಿ ಅದಕ್ಕಾಗಿ ರೂ. 10.00 ಕೋಟಿ ಅನುದಾನವನ್ನು ಒದಗಿಸಲಾಗಿದೆ. ಈ ಯೋಜನೆಯನ್ವಯ ಅಂಗನವಾಡಿ ಕಾರ್ಯಕರ್ತೆಯರಿಂದ ರೂ. 150/– ಹಾಗೂ ಸಹಾಯಕಿಯರಿಂದ ರೂ. 75/– ಮಾಹೆಯಾನ ವಂತಿಗೆ ವಸೂಲಿ ಮಾಡಿ ಅಷ್ಟೇ ಮೊತ್ತದ ವಂತಿಗೆಯನ್ನು ಸರ್ಕಾರ ಭರಿಸಬೇಕಾಗಿರುತ್ತದೆಂದು ವಿವರಿಸುತ್ತಾ, 2010–11ನೇ ಸಾಲಿನಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಮಂಜೂರಾತಿ ನೀಡುವಂತೆ ಮೇಲೆ ಓದಲಾದ ಪತ್ರಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 119 ಐಸಿಡಿ 2010, ಬೆಂಗಳೂರು, ದಿನಾಂಕ : 18–3–2011

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, 2010–11ನೇ ಸಾಲಿನಲ್ಲಿ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರಿಗೆ "ವಂತಿಗೆ ಆಧಾರಿತ ಪಿಂಚಣಿ ಯೋಜನೆ" ಯನ್ನು ಈ ಕೆಳಕಂಡ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಮಾರ್ಗಸೂಚಿ :

1. ಯೋಜನೆಯ ಹೆಸರು : ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ "ವಂತಿಗೆ ಆಧಾರಿತ ಪಿಂಚಣಿ ಯೋಜನೆ"

2. ಅರ್ಹತೆ : ದಿನಾಂಕ : 1–4–1955ರ ಹಾಗೂ ನಂತರದಲ್ಲಿ ಜನಿಸಿದ ಎಲ್ಲಾ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ.

3. ಯೋಜನೆಯ ರೂವಾರಿ : (ಎ) NPS Lite ಯೋಜನೆಯನ್ನು PFRDA ಯವರು ರೂಪಿಸಿದ್ದು ಕಇಖಅಂ ಉಸ್ತುವಾರಿಯಲ್ಲಿ (governed) ನೂತನ ಪಿಂಚಣಿ ಯೋಜನೆ NPS lite ನಂತೆ ಅನುಷ್ಠಾನಗೊಳಿಸಲಾಗುವುದು.

   (ಬಿ) ಕೇಂದ್ರೀಯ ದಾಖಲೆ ನಿರ್ವಹಣ ಏಜೆನ್ಸಿ (CRA) ಮತ್ತು NPS ಟ್ರಸ್ಟ್ ಜೊತೆ ನಿರ್ದೇಶಕರು ನಿಯಮಾನುಸಾರ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು.

4. ವಂತಿಗೆ ಪಾವತಿ : ಎ) ಅಂಗನವಾಡಿ ಕಾರ್ಯಕರ್ತೆಯರ ಪಾಲು–ಪ್ರತಿ ತಿಂಗಳು ರೂ. 150/–
   ಅಂಗನವಾಡಿ ಸಹಾಯಕಿಯರ ಪಾಲು–ಪ್ರತಿ ತಿಂಗಳು ರೂ. 75/–

   ಬಿ) ಸರ್ಕಾರದ ಪಾಲು :
   (೧) ಅಂಗನವಾಡಿ ಕಾರ್ಯಕರ್ತೆಯರಿಗೆ–ಪ್ರತಿ ತಿಂಗಳು ರೂ. 150/–
   (೨) ಅಂಗನವಾಡಿ ಸಹಾಯಕಿಯರಿಗೆ–ಪ್ರತಿ ತಿಂಗಳು ರೂ. 75/–

   ಸಿ) ಕೇಂದ್ರ ಸರ್ಕಾರದ ಸ್ವಾವಲಂಬನ ಯೋಜನೆಯಡಿ ದೊರೆಯುವ ವಂತಿಗೆಯನ್ನು ಕೂಡ ಅಂಗನವಾಡಿ ನೌಕರರ ಖಾತೆಗೆ ಜಮಾ ಮಾಡಲಾಗುವುದು.

   ಡಿ) ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರು 2010–11ನೇ ಸಾಲಿನಲ್ಲಿ ತಮ್ಮ ಪಾಲಿನ ಎರಡು ತಿಂಗಳ ವಂತಿಗೆಯನ್ನು ದಿನಾಂಕ : 31–3–2011ರ ಒಳಗಾಗಿ ನೀಡಿದಲ್ಲಿ, ರಾಜ್ಯ ಸರ್ಕಾರವು ಒಟ್ಟು ವಂತಿಗೆಯನ್ನು ರೂ. 1000/– ಕ್ಕೆ ಸರಿದೂಗಿಸಲು ಹೆಚ್ಚುವರಿಯಾಗಿ ತನ್ನ ವಂತಿಗೆಯನ್ನು ವಿಶೇಷ ಪ್ರಕರಣವೆಂದು ನೀಡುವುದು.

   ಇ) ಕ್ರಮ ಸಂಖ್ಯೆ (ಡಿ) ರಂತೆ ಹೆಚ್ಚುವರಿಯಾಗಿ ದಿನಾಂಕ : 1–4–2011 ಕ್ಕೆ 47 ರಿಂದ 55 ವರ್ಷದ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ರಾಜ್ಯ ಸರ್ಕಾರವು ಒಂದು ಬಾರಿ ಈ ಕೆಳಕಂಡಂತೆ ಇಡಿಗಂಟನ್ನು ವಂತಿಗೆಯಾಗಿ ನೀಡುತ್ತದೆ.

ದಿನಾಂಕ : 31–3–2011 ಕ್ಕೆ ವಯಸ್ಸು ಮತ್ತಿತರ ಮಾಹಿತಿ

ವಯಸ್ಸು	ಅಂಗನವಾಡಿ ಕಾರ್ಯಕರ್ತೆಯರು ರೂ. ಗಳಲ್ಲಿ	ಅಂಗನವಾಡಿ ಸಹಾಯಕಿಯರು ರೂ.ಗಳಲ್ಲಿ
47	–	100
48	–	2400
49	1300	5000
50	5700	7800
51	10500	10800
52	15700	14200
53	21500	17800
54	27900	21900
55	34800	26300

5. ಪಿಂಚಣಿ ಮೊತ್ತ ಹಾಗೂ ಹಿಂಪಡೆಯುವ ನಿಯಮ : 60 ವರ್ಷವಾದ ನಂತರ NPS Lite ಯೋಜನೆಯಡಿ PFRDA ಯವರು ನಿಗದಿಸಿದಂತೆ.

6. ಹಣ ಹೂಡಿಕೆ ಆಯ್ಕೆ : ಕೇಂದ್ರ ಸರ್ಕಾರವು ತನ್ನ ನೌಕರರಿಗೆ ಕಾಲಕಾಲಕ್ಕೆ ಅನುಮೋದಿಸುವಂತೆ.

7. ಸಿ.ಆರ್.ಎ ರವರ ಚಾರ್ಜ್: ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರು ಯೋಜನೆಯಡಿ ಪ್ರಾರಂಭಿಕ ನೋಂದಣಿಗಾಗಿ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸುತ್ತದೆ ಹಾಗೂ ಪ್ರತಿ ವರ್ಷ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರು ಗರಿಷ್ಟ 12 ಬಾರಿ ವಂತಿಗೆಯನ್ನು ನೀಡುವಲ್ಲಿ ಬೇಕಾಗುವ ವೆಚ್ಚವನ್ನು ಸಹ ರಾಜ್ಯ ಸರ್ಕಾರ ಭರಿಸುತ್ತದೆ.

8. ಯೋಜನೆಯ Aggregator : ಎ) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಸಂಘಟಕರು) ಇವರು ಕಈಖಅಂ ಯಲ್ಲಿ Aggregator ರಾಗಿ ನೋಂದಾಯಿಸಿಕೊಳ್ಳುವುದು.

ಬಿ) ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಪ್ರತ್ಯೇಕ ಹೆಚ್.ಆರ್.ಎಂ.ಎಸ್. ಅನ್ನು ಸ್ಥಾಪಿಸುವುದು.

9. ಯೋಜನೆಯ ವೆಚ್ಚ : ಲೆಕ್ಕಶೀರ್ಷಿಕೆ 2235-60-800-2-08-059 (ಯೋಜನೆ) ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 31 ವೆಚ್ಚ-3/11 ದಿನಾಂಕ : 8-2-2011 ರನ್ವಯ ಮತ್ತು ದಿನಾಂಕ : 22-2-2011 ರಂದು ನಡೆದ ಸಚಿವ ಸಂಪುಟದ ನಿರ್ಣಯದನ್ವಯ (ಪ್ರಕರಣ ಸಂಖ್ಯೆ : ಸಿ:98/2011) ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎನ್. ಕೃಷ್ಣಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ-1

ಪಿ.ಆರ್. 867 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಪಶುಚಿಕಿತ್ಸಾಲಯ, ಹೆಸರಘಟ್ಟ, ಬೆಂಗಳೂರು ನಗರ ಜಿಲ್ಲೆ ಇಲ್ಲಿನ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಮೊಲ ಸಾಕಾಣಿಕೆ ಕೇಂದ್ರ, ಪಶುಆಸ್ಪತ್ರೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ ಇಲ್ಲಿಗೆ ಸ್ಥಳಾಂತರಿಸಿರುವುದನ್ನು ರದ್ದುಪಡಿಸುವಿಕೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 550 ಪಸಸೇ 2009, ದಿನಾಂಕ : 2-12-2009.

2) ಪತ್ರ ಸಂಖ್ಯೆ : 631/2009-10, ದಿನಾಂಕ : 2-12-2009.

3) ಪತ್ರ ಸಂಖ್ಯೆ : ಜಿಇಎ 11712/2009-10, ದಿನಾಂಕ : 2-12-2009.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಪಶುಚಿಕಿತ್ಸಾಲಯ, ಹೆಸರಘಟ್ಟ, ಬೆಂಗಳೂರು ನಗರ ಜಿಲ್ಲೆ ಇಲ್ಲಿನ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಮೊಲ ಸಾಕಾಣಿಕೆ ಕೇಂದ್ರ, ಪಶುಆಸ್ಪತ್ರೆ, ಶಿರಸಿ ಉತ್ತರ ಕನ್ನಡ ಜಿಲ್ಲೆ ಇಲ್ಲಿಗೆ ಸ್ಥಳಾಂತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ, ಬೆಂಗಳೂರು ಇವರು ಹೆಸರಘಟ್ಟ ಸುತ್ತಮುತ್ತಲು ಅನೇಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಶುವೈದ್ಯಕೀಯ ಫಾರಂಗಳು ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚಾಗಿ ರಾಸುಗಳು ಕಾಲುಬಾಯಿ ಜ್ವರ ಕಾಯಿಲೆಗೆ ತುತ್ತಾಗುತ್ತಿದ್ದು, ಇಂತಹ ತುರ್ತು ಸಂದರ್ಭವಿರುವ ಕ್ಷೇತ್ರದ ಹುದ್ದೆಯನ್ನು ಬೇರೆ ಜಿಲ್ಲೆಗೆ ಸ್ಥಳಾಂತರ ಮಾಡಿ ಮೂಕ ಪ್ರಾಣಿಗಳಿಗೆ ತೊಂದರೆಯಾಗುವುದನ್ನು ತಡೆಗಟ್ಟಲು ಹಾಗೂ ಹುದ್ದೆ ಸ್ಥಳಾಂತರ ಮಾಡದಿರುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರೂ ಸಹ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಸ್ಥಳಾಂತರ ಮಾಡಿದರೆ ಪ್ರಾಣಿಗಳ ಚಿಕಿತ್ಸೆಗೆ ತೊಂದರೆಯಾಗುವುದಲ್ಲದೇ ಪಶುಸಂಪತ್ತಿನ ಅಳಿವಿಗೆ ಕಾರಣವಾಗಲಿರುವುದರಿಂದ ಹುದ್ದೆ ಸ್ಥಳಾಂತರವನ್ನು ಕೈಬಿಡಲು ಕೋರಿರುತ್ತಾರೆ. ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ಸ್ಥಳೀಯ ಶಾಸಕರ ಅಭಿಪ್ರಾಯವನ್ನು ಪರಿಗಣಿಸಿ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆ ಸ್ಥಳಾಂತರಿಸಿರುವುದನ್ನು ರದ್ದುಪಡಿಸಲು ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಪಸಂಮೀ 550 ಪಸಸೇ 2009, ಬೆಂಗಳೂರು, ದಿನಾಂಕ : 15ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ ಪಶುಚಿಕಿತ್ಸಾಲಯ, ಹೆಸರಘಟ್ಟ, ಬೆಂಗಳೂರು ನಗರ ಜಿಲ್ಲೆ ಇಲ್ಲಿನ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಮೊಲ ಸಾಕಾಣಿಕೆ ಕೇಂದ್ರ, ಪಶು ಆಸ್ಪತ್ರೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ ಇಲ್ಲಿಗೆ ಸ್ಥಳಾಂತರಿಸಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ ಹಾಗೂ ಸದರಿ ಹುದ್ದೆಯನ್ನು ಪಶುಚಿಕಿತ್ಸಾಲಯ, ಹೆಸರಘಟ್ಟ, ಬೆಂಗಳೂರು ನಗರ ಜಿಲ್ಲೆ ಇಲ್ಲಿಯೇ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಪಿ. ನಾಗರಾಜ

ಪೀಠಾಧಿಕಾರಿ-2,

ಪಿ.ಆರ್. 868 ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ-ಎ).

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಶ್ರೀ ಪುಟ್ಟರಾಮಯ್ಯ, ನೋಟರಿ, ಬೆಂಗಳೂರು ಇವರ ವಿರುದ್ಧ ಸ್ವೀಕೃತವಾದ ದೂರು ಬಗ್ಗೆ ಶಿಸ್ತು ಕ್ರಮ.

ಓದಲಾಗಿದೆ : 1) ಶ್ರೀ ಎಂ. ಶಿವಾನಂದ ಇವರಿಂದ ಸ್ವೀಕೃತವಾದ ದೂರು ಮನವಿ ದಿನಾಂಕ : 28-10-2009.

2) ಸರ್ಕಾರದ ಪತ್ರ ಸಂಖ್ಯೆ : ಲಾ 135 ಎಲ್‌ಸಿಎಲ್ 2009, ಬೆಂಗಳೂರು, ದಿನಾಂಕ 29-12-2009/ 2-1-2010.

3) ಶ್ರೀಯುತರ ಲಿಖಿತ ಹೇಳಿಕೆ ದಿನಾಂಕ : 15-1-2010.

4) ಸರ್ಕಾರದ ಪತ್ರ ಸಂಖ್ಯೆ : ಲಾ 37 ಎಲ್‌ಸಿಎಲ್ 2010, ದಿನಾಂಕ : 8/10-2-2010 ಹಾಗೂ 26/ 29-3-2010.

5) ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರ ಪತ್ರ ಸಂಖ್ಯೆ : ಎಡಿಎಂ ಃ/ಬಿ/330/2010, ದಿನಾಂಕ : 30-12-2010.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಮನವಿ ದಿನಾಂಕ : 28-10-2009 ರಂದು ಶ್ರೀ ಎಂ. ಶಿವಾನಂದ ಇವರು ಶ್ರೀ ಪುಟ್ಟರಾಮಯ್ಯ, ನೋಟರಿ, ಬೆಂಗಳೂರು ಇವರ ವಿರುದ್ಧ ಸಲ್ಲಿಸಿದ್ದ ದೂರು ಮನವಿಯನ್ನು ಮೇಲೆ (2) ರಲ್ಲಿ ಓದಲಾದ ದಿನಾಂಕ : 29-12-2009/2-1-2010 ರ ಸರ್ಕಾರದ ಪತ್ರದಲ್ಲಿ ನೋಟರಿಯವರಿಗೆ ಕಳುಹಿಸಿ ಅವರ ವಿರುದ್ಧದ ಆರೋಪದ ಬಗ್ಗೆ ಲಿಖಿತ ಹೇಳಿಕೆಯನ್ನು ಕೋರಲಾಗಿತ್ತು. ಅದರಂತೆ ನೋಟರಿಯವರು ಮೇಲೆ (3)ರಲ್ಲಿ ಓದಲಾದ ದಿನಾಂಕ : 15-1-2010ರ ಮನವಿಯಲ್ಲಿ ಲಿಖಿತ ಹೇಳಿಕೆ ಸಲ್ಲಿಸಿದ್ದು, ಅದನ್ನು ಮೇಲೆ (4) ರಲ್ಲಿ ಓದಲಾದ ಸರ್ಕಾರದ ಪತ್ರಗಳಲ್ಲಿ ದೂರು ಹಾಗೂ ಶ್ರೀಯುತರ ಲಿಖಿತ ಹೇಳಿಕೆಯನ್ನು ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರಿಗೆ ಕಳುಹಿಸಿ ನಿಯಮಾನುಸಾರ ಪರಿಶೀಲಿಸಿ ವಿಚಾರಣಾ ವರದಿಯನ್ನು ಕಳುಹಿಸುವಂತೆ ಕೋರಲಾಗಿತ್ತು. ಅದರಂತೆ ಪ್ರಧಾನ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರು ಮೇಲೆ (5) ರಲ್ಲಿ ಓದಲಾದ ದಿನಾಂಕ : 30-12-2010ರ ಪತ್ರದೊಂದಿಗೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ನೋಟರಿಯವರು ಮೂಲ ಪಾಲುಪಟ್ಟಿ ದಸ್ತಾವೇಜನ್ನು ಪರಿಶೀಲಿಸದೆ ತಕರಾರು ದಾಸ್ತಾವೇಜಿನ ವಿಷಯವನ್ನು ಸಿಂಧು (ತಿಚಿಟುಜ) ಎಂದು ನಂಬಿ ಪ್ರಮಾಣೀಕರಿಸಿರುವುದು ಕಂಡುಬಂದಿದ್ದು, ಇದನ್ನು ಉದಾರವಾಗಿ ಪರಿಗಣಿಸಬಹುದೆಂದು ತಿಳಿಸಿದ್ದಾರೆ. ನೋಟರಿಯವರಿಂದ ಲೋಪವಾಗಿದ್ದರೂ, ಕಠಿಣ ಕ್ರಮ ತೆಗೆದುಕೊಳ್ಳುವಂತಹ ಪ್ರಕರಣವಾಗಿರುವುದಿಲ್ಲವೆಂದು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : 37 ಎಲ್‌ಸಿಎಲ್ 2010, ಬೆಂಗಳೂರು, ದಿನಾಂಕ : 19-3-2011

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಪುಟ್ಟರಾಮಯ್ಯ, ನೋಟರಿ, ಬೆಂಗಳೂರು ಇವರಿಗೆ ಇನ್ನು ಮುಂದೆ ಇಂತಹ ತಪ್ಪುಗಳು ಪುನರಾವರ್ತನೆಯಾಗದಂತೆ ಕರ್ತವ್ಯ ನಿರ್ವಹಿಸಲು ತಿಳುವಳಿಕೆ ನೀಡಿ ನೋಟರಿಗಳ ನಿಯಮಗಳು 1956ರ ನಿಯಮ 13(12) (ಬಿ) ಃಃಃ ರನ್ವಯ ಎಚ್ಚರಿಕೆ ನೀಡಿ ಪ್ರಕರಣ ಮುಕ್ತಾಯಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಆರ್. ಶಕುಂತಲ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2),

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 869

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿರುವ ಹೈಟೆನ್‌ಷನ್ ಲೈನ್ ಸ್ಥಳಾಂತರ-ಅನುದಾನ ಬಿಡುಗಡೆ ಕುರಿತು.

ಓದಲಾಗಿದೆ : 1) ಮುಖ್ಯ ಅಭಿಯಂತರರು, (ವಿದ್ಯುತ್) ಪ್ರಸರಣ ನಿಗಮ ನಿಯಮಿತ, ಗುಲ್ಬರ್ಗಾ ಅವರ ಪತ್ರ ಸಂಖ್ಯೆ: ಸಿಇಇ/ಟಿಝಡ್/ಜಿಎಲ್‌ಬಿ/ ಎಸ್‌ಇಇ(ಓ)/ಎಇಇ.2/2010-11/12675-78, ದಿನಾಂಕ : 21-2-2011.

2) ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಗುಲ್ಬರ್ಗಾ, ಇವರ ಪತ್ರ ಸಂಖ್ಯೆ : ಕಂ.ಭೂಸ್ವಾ-429/08-09, ದಿನಾಂಕ : 24-2-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂ. (1)ರಲ್ಲಿನ ಪತ್ರದಲ್ಲಿ ಮುಖ್ಯ ಅಭಿಯಂತರರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಗುಲ್ಬರ್ಗಾ, ಇವರು ಗುಲ್ಬರ್ಗಾ ವಿಮಾನ ನಿಲ್ದಾಣ ಸ್ಥಾಪನೆಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿನ ಹೈಟೆನ್‌ಷನ್ ಲೈನ್ ಸ್ಥಳಾಂತರ ಮತ್ತು ವಿವಿಧ ವೆಚ್ಚಕ್ಕಾಗಿ ರೂ. 112.00 ಲಕ್ಷ ಅಂದಾಜು ಪತ್ರಿಕೆಯನ್ನು ಸಿದ್ಧಪಡಿಸಿ ಕಳುಹಿಸಿರುತ್ತಾರೆ.

ಕ್ರಮ ಸಂ. (2) ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿ, ಗುಲ್ಬರ್ಗಾ, ಇವರು ಗುಲ್ಬರ್ಗಾ ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿರುವ ಹೈಟೆನ್‌ಷನ್ ಲೈನ್ ಸ್ಥಳಾಂತರಕ್ಕಾಗಿ ಒಟ್ಟು 112.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿದ್ದಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾವಿ 2011, ಬೆಂಗಳೂರು, ದಿನಾಂಕ : 17-3-2011

ಗುಲ್ಬರ್ಗಾ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗಾಗಿ ಗುಲ್ಬರ್ಗಾ ತಾಲ್ಲೂಕಿನ ಶ್ರೀನಿವಾಸ ಸರಡಗಿ ಗ್ರಾಮದಲ್ಲಿ ಒಟ್ಟು 695.30 ಎಕರೆ ಜಮೀನಿನಲ್ಲಿರುವ ಹೈಟೆನ್‌ಷನ್ ಲೈನ್ ಸ್ಥಳಾಂತರ (110 ಏಗಿ ಖುಚಿಟಿಛಿಜ ಉಣಟಛಿಡಿಂಚಿ 1[ಟ] ಛಿಡಿಛಿಣಣ ಟುಟಜ) ಕ್ಕಾಗಿ ರೂ. 112.00 ಲಕ್ಷಗಳನ್ನು ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

2. ಸದರಿ ಮೊತ್ತವನ್ನು 2010-11ನೇ ಸಾಲಿನ ಲೆಕ್ಕಶೀರ್ಷಿಕೆ 5465-01-190-1-05-ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ-211-ಬಂಡವಾಳ ಹೂಡಿಕೆ (ಯೋಜನೆ)-ಯಡಿಯಲ್ಲಿ ಭರಿಸುವುದು.

3. ಈ ಹಣವನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ, ಇವರು ಪೇಯಿಸ್ ರಸೀದಿ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು, ಇಲ್ಲಿ ತೆಗೆಯಲು ಅನುಮತಿಸಿದೆ.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆರ್ಥಿಕ ಇಲಾಖೆ 443 ವೆಚ್ಚ–1/11 ದಿನಾಂಕ : 15–3–2011 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸಿ.ಎ. ಬಾಬುರವೀಂದ್ರನಾಥ್ ಪಟೇಲ್
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. 870 ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಪರಶುರಾಮ್ ಆರ್. ದಬಾಲಿ, ಪ್ರೊ. ಪಿ.ಎಸ್.ಐ ರವರ ಖಾಯಂ ಪೂರ್ವ ಅವಧಿಯನ್ನು ವಿಸ್ತರಿಸುವ ಬಗ್ಗೆ.
ಓದಲಾಗಿದೆ : ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ : 47/ಸಿಬ್ಬಂದಿ–1/2007–08, ದಿನಾಂಕ : 27–11–2010.

ಪ್ರಸ್ತಾವನೆ :

ಶ್ರೀ ಪರಶುರಾಮ್ ಆರ್. ದಬಾಲಿ ರವರು ಪೊಲೀಸ್ ಇಲಾಖೆಯಲ್ಲಿ ಸೇವಾನಿರತ ಪಿಎಸ್ಐ ಆಗಿ ನೇಮಕಾತಿ ಹೊಂದಿ, ದಿನಾಂಕ : 15–12–2003 ರಂದು ಕರ್ತವ್ಯಕ್ಕೆ ವರದಿ ಮಾಡಿರುತ್ತಾರೆ. ಇವರ 2 1/2 ವರ್ಷಗಳ ಪರೀಕ್ಷಾರ್ಥ ಅವಧಿಯು ದಿನಾಂಕ : 15–6–2006 ರಂದು ಪೂರ್ಣಗೊಳ್ಳುತ್ತದೆ. ಇವರು ನಿಗದಿತ ಇಲಾಖಾ ಪರೀಕ್ಷೆಯಾದ ಅಕೌಂಟ್ಸ್ ಹೈಯರ್‌ನಲ್ಲಿ 2004ನೇ ಸಾಲಿನ ಮೊದಲನೇ ಅಧಿವೇಶನದಲ್ಲಿ ಉರ್ತೀರ್ಣರಾಗಿರುತ್ತಾರೆ. ಆದ್ದರಿಂದ ಇವರ ಖಾಯಂಪೂರ್ವ ಅವಧಿಯನ್ನು ನೇಮಕಾತಿ ಪ್ರಾಧಿಕಾರದ ಅಧಿಕಾರಕ್ಕೊಳಪಟ್ಟು ದಿನಾಂಕ : 15–6–2006 ರಿಂದ 14–9–2007 ರವರೆಗೆ 1 ವರ್ಷ 3 ತಿಂಗಳ ಕಾಲ ವಿಸ್ತರಿಸಿ ಐಜಿಪಿ, ಈಶಾನ್ಯ ವಲಯ ರವರು ದಿನಾಂಕ : 20–7–2007 ರಲ್ಲಿ ಆದೇಶಿಸಿರುತ್ತಾರೆ. ನಂತರ ಅನುಪೂರಕ ಪರೀಕ್ಷೆಯಲ್ಲಿ ಸಿ.ಆರ್.ಪಿ.ಸಿ. ವಿಷಯದಲ್ಲಿ ಉತ್ತೀರ್ಣರಾಗಿರುತ್ತಾರೆ.

ಸದರಿಯವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಬಾಕಿ ಇರುವುದಿಲ್ಲವೆಂದು ಹಾಗೂ ಇವರು ಕರ್ತವ್ಯ ನಿಷ್ಠೆ ಉಳ್ಳವರಾಗಿದ್ದು, ಕೆ.ಸಿಎಸ್. (ಪ್ರೊಬೇಷನ್) ನಿಯಮ 1977ರ ನಿಯಮ 4 ಮತ್ತು 5(1) ರನ್ವಯ ಇವರು ಹೊಂದಿರುವ ಪಿ.ಎಸ್.ಐ. ಹುದ್ದೆಯ ಕಾರ್ಯಭಾರ ನಿರ್ವಹಿಸಲು ಸಮರ್ಥರಿರುತ್ತಾರೆಂದು ಖಾಯಂ ಪೂರ್ವ ಅವಧಿಯನ್ನು ದಿನಾಂಕ : 14–9–2007 ರಿಂದ 28–7–2009 ರ ವರೆಗೆ ಕೆ.ಸಿ.ಎಸ್. (ಪ್ರೊಬೇಷನ್) ನಿಯಮಗಳು, 1977 ರ ನಿಯಮ 4(1) (ii) ರನ್ವಯ ವಿಸ್ತರಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 16 ಪೊಸಇ 2010, ಬೆಂಗಳೂರು, ದಿನಾಂಕ : 19–3–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರಿ) ನಿಯಮಾವಳಿಗಳು, 1977ರ ನಿಯಮ 4(1) (೨) ರನ್ವಯ ಶ್ರೀ ಪರಶುರಾಮ್ ಆರ್. ದಬಾಲಿ, ಪ್ರೊ.ಪಿ.ಎಸ್.ಐ. ರವರ ಖಾಯಂ ಪೂರ್ವ ಅವಧಿಯನ್ನು ದಿನಾಂಕ : 14–9–2007 ರಿಂದ 28–7–2009 ರವರೆಗೆ ವಿಸ್ತರಿಸಿ ಸರ್ಕಾರವು ಆದೇಶಿಸಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾಸೇ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗದಿಪಡಿಸುವುದು. ಹೀಗೆ ನಿಗದಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. 871 ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು).

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ವಿಷಯ : ಶ್ರೀ ಕೆ.ಆರ್. ಚಾಮಯ್ಯ, ಏಕಸದಸ್ಯ ಸಮಿತಿಯನ್ನು ದಿನಾಂಕ : 1–4–2011 ರಿಂದ 31–7–2011 ರವರೆಗೆ ಮುಂದುವರೆಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 38 ಆಡಳಿತ 2004, ದಿನಾಂಕ : 21–7–2005.
2. ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 121 ಆಡಳಿತ 2006, ದಿನಾಂಕ : 28–10–2006.
3. ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 118 ಆಡಳಿತ 2007, ದಿನಾಂಕ : 6–11–2007.
4. ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 185 ಆಡಳಿತ 2008, ದಿನಾಂಕ : 31–3–2009.
5. ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 23 ಆಡಳಿತ 2010, ದಿನಾಂಕ : 30–3–2010.
6. ಲೋಕಾಯುಕ್ತ, ಕರ್ನಾಟಕ ಸರ್ಕಾರ ಇವರ ಅ.ಸ. ಪತ್ರ ಸ : ಐಟಿಐ/ಕಿಖ–47/2009–10, ದಿನಾಂಕ : 9–3–2011.

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿನ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಸರ್ಕಾರದ ನಿವೃತ್ತ ಕಾನೂನು ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ನಿವೃತ್ತಿ ಉಪಾಧ್ಯಕ್ಷರು ಆದ ಶ್ರೀ ಕೆ.ಆರ್. ಚಾಮಯ್ಯರವರ ನೇತೃತ್ವದಲ್ಲಿ ಸಿಬ್ಬಂದಿ ಸಮೇತ ಏಕ ಸದಸ್ಯ ಸಮಿತಿಯನ್ನು

ರಚಿಸಲಾಯಿತು. ಏಕ ಸದಸ್ಯ ಸಮಿತಿಯ ಅಧ್ಯಕ್ಷರು ಕಾರ್ಯವರದಿ ಮಾಡಿಕೊಂಡ ನಂತರದಿಂದ ಒಂದು ವರ್ಷದ ಮಟ್ಟಿಗೆ ಕಾಲಾವಧಿಯನ್ನು ನಿಗದಿಪಡಿಸಲಾಗಿತ್ತು. ಬೆಂಗಳೂರಿನ ವಿಶ್ವೇಶ್ವರಯ್ಯ ಮುಖ್ಯ ಗೋಪುರದ 11ನೇ ಮಹಡಿಯಲ್ಲಿ ಸದರಿ ಏಕಸದಸ್ಯ ಸಮಿತಿಗೆ ಸ್ಥಳಾವಕಾಶ ಕಲ್ಪಿಸಿದ ನಂತರ ಶ್ರೀ ಕೆ.ಆರ್. ಚಾಮಯ್ಯರವರು ದಿನಾಂಕ : 7–12–2005ರಂದು ಈ ಸಮಿತಿಯ ಕೆಲಸ ಕಾರ್ಯಗಳ ನಿರ್ವಹಣೆಗೆ ವರದಿ ಮಾಡಿಕೊಂಡಿರುತ್ತಾರೆ.

ಮೇಲೆ ಓದಲಾದ (2) ರಲ್ಲಿನ ಸರ್ಕಾರಿ ಆದೇಶದಲ್ಲಿ ಏಕ ಸದಸ್ಯ ಸಮಿತಿಯ ಅವಧಿಯನ್ನು ದಿನಾಂಕ : 7–12–2006 ರಿಂದ ದಿನಾಂಕ : 6–12–2007 ರವರೆಗೆ ಒಂದು ವರ್ಷದವರೆಗೆ ವಿಸ್ತರಿಸಲಾಗಿದೆ.

ಮೇಲೆ ಓದಲಾದ (3) ರಲ್ಲಿನ ಸರ್ಕಾರಿ ಆದೇಶದಲ್ಲಿ ಏಕ ಸದಸ್ಯ ಸಮಿತಿಯ ಕಾರ್ಯಾವಧಿಯನ್ನು ದಿನಾಂಕ : 7–12–2007 ರಿಂದ 31–3–2009 ರವರೆಗೆ ವಿಸ್ತರಿಸಲಾಗಿದೆ.

ಮೇಲೆ ಓದಲಾದ (4) ರಲ್ಲಿ ಏಕ ಸದಸ್ಯ ಸಮಿತಿಯ ಕಾರ್ಯಾವಧಿಯನ್ನು ದಿನಾಂಕ : 1–4–2009 ರಿಂದ 31–3–2010 ರವರೆಗೆ ವಿಸ್ತರಿಸಲಾಗಿದೆ.

ಮೇಲೆ ಓದಲಾದ (5) ರಲ್ಲಿ ಏಕ ಸದಸ್ಯ ಸಮಿತಿಯ ಕಾರ್ಯಾವಧಿಯನ್ನು ದಿನಾಂಕ : 1–4–2010 ರಿಂದ 31–3–2011 ರವರೆಗೆ ವಿಸ್ತರಿಸಲಾಗಿದೆ.

ಉಲ್ಲೇಖ (6)ರಲ್ಲಿ ಓದಲಾದ ಪತ್ರದಲ್ಲಿನ ಪ್ರಸ್ತಾವನೆ ಪರಿಗಣಿಸಿ ಏಕಸದಸ್ಯ ಸಮಿತಿಯ ಅವಧಿಯನ್ನು ದಿನಾಂಕ : 1–4–2011 ರಿಂದ 31–7–2011 ರವರೆಗೆ ಮುಂದುವರೆಸಲು ಸರ್ಕಾರವು ತೀರ್ಮಾನಿಸುವುದರಿಂದ, ಅನುಮೋದಿಸಿರುವುದರಿಂದ, ದಿನಾಂಕ : 31–3–2011 ಕ್ಕೆ ಈ ಸಮಿತಿಯ ಕಾರ್ಯಾವಧಿಯು ಮುಕ್ತಾಯಗೊಳ್ಳುತ್ತಿರುವುದರಿಂದ ಅತೀ ತುರ್ತು ಕಾರ್ಯಗಳ ಹಿನ್ನೆಲೆಯಲ್ಲಿ, ಆರ್ಥಿಕ ಇಲಾಖೆಯ ಘಟನೋತ್ತರ ಸಹಮತಿಯನ್ನು ಕಾಯ್ದಿರಿಸಿ ಆದೇಶ ಹೊರಡಿಸಲು ಉದ್ದೇಶಿಸಿದೆ. ಹಾಗೂ ಸರ್ಕಾರವು, ಮೇಲ್ಕಂಡ ಉದ್ದೇಶಕ್ಕೆ ವಿಸ್ತರಿಸುವುದಲ್ಲದೆ ಆರ್ಥಿಕ ಅಧಿನಿಯಮಗಳ ಮತ್ತು ಅದರಡಿಯಲ್ಲಿನ ನಿಯಮಾವಳಿಗಳ ಸಮೇತ ಪುಸ್ತಕ ಸಂಕಲನವನ್ನು ತಯಾರಿಸಲು ಹಾಗೂ 2000–2010 ರವರೆಗೆ ವ್ಯಪಗತವಾಗಿರುವ (Spent Acts) ತಿದ್ದುಪಡಿ ಅಧಿನಿಯಮಗಳ ನಿರಸನ ವಿಧೇಯಕವನ್ನು ಪ್ರಸ್ತಾಪಿಸುವಂತೆ ಹೆಚ್ಚುವರಿ ಕಾರ್ಯಗಳನ್ನು ವಹಿಸುತ್ತಾ, ದಿನಾಂಕ : 1–4–2011 ರಿಂದ 31–7–2011 ರವರೆಗೆ ಏಕ ಸದಸ್ಯ ಸಮಿತಿಯ ಕಾರ್ಯಾವಧಿಯನ್ನು ವಿಸ್ತರಿಸಲು ಉದ್ದೇಶಿಸಿದೆ.

ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಸಂವ್ಯಶಾಇ 65 ಆಡಳಿತ 2011, ಬೆಂಗಳೂರು, ದಿನಾಂಕ : 19–3–2011

ದಿನಾಂಕ : 21–7–2005 ರ ಸರ್ಕಾರಿ ಆದೇಶ ಸಂಖ್ಯೆ : ಸಂವ್ಯಶಾಇ 38 ಆಡಳಿತ 2004 ರಲ್ಲಿ ರಚಿತವಾಗಿರುವ ಶ್ರೀ ಕೆ.ಆರ್. ಚಾಮಯ್ಯ ಏಕ ಸದಸ್ಯ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪ್ರಾಂತೀಯ ಅಧಿನಿಯಮಗಳ ಸಂಕಲನದ ಕೋಡ್ ತಯಾರಿಸುವ ಕೆಲಸದೊಂದಿಗೆ ಹಾಗೂ ಆರ್ಥಿಕ ಅಧಿನಿಮಯಗಳ (Financial Acts) ಮತ್ತು ಅದರಡಿಯಲ್ಲಿನ ನಿಯಮಾವಳಿಗಳ ಸಮೇತ ಪುಸ್ತಕ ಸಂಕಲನವನ್ನು ತಯಾರಿಸಲು ಹಾಗೂ 2000–2010ರವರೆಗೆ ವ್ಯಪಗತವಾಗಿರುವ (Spent Acts) ತಿದ್ದುಪಡಿ ಅಧಿನಿಯಮಗಳ ನಿರಸನ ವಿಧೇಯಕವನ್ನು ಪ್ರಸ್ತಾಪಿಸುವಂತೆ ಹೆಚ್ಚುವರಿ ಕಾರ್ಯಗಳನ್ನು ವಹಿಸುತ್ತಾ, ಏಕ ಸದಸ್ಯ ಸಮಿತಿಯ ಕಾರ್ಯಾವಧಿಯನ್ನು ದಿನಾಂಕ : 1–4–2011 ರಿಂದ 31–7–2011 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಸದರಿ ಸಮಿತಿಗೆ ಮಂಜೂರು ಮಾಡಿರುವ ಪೂರಕ ಸಿಬ್ಬಂದಿಯನ್ನು, ವಾಹನ ಮತ್ತು ದೂರವಾಣಿ ಸೌಲಭ್ಯಗಳು ಹಾಗೂ ಏಕ ಸದಸ್ಯ ಸಮಿತಿಯ ಸದಸ್ಯರಾದ ಶ್ರೀ ಕೆ.ಆರ್. ಚಾಮಯ್ಯರವರ ಸೇವಾ ಷರತ್ತುಗಳು ಹಾಗೂ ಇತರೆ ಸೌಲಭ್ಯಗಳೊಂದಿಗೆ ಮೇಲೆ ಹೇಳಲಾದ ಅವಧಿಗೆ ಏಕ ಸದಸ್ಯ ಸಮಿತಿಯು ಮುಂದುವರಿಯುವಂತೆ ಆದೇಶಿಸಲಾಗಿದೆ.

ಈ ಸಮಿತಿಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2052–00–090–0–20–ಶ್ರೀ ಕೆ.ಆರ್. ಚಾಮಯ್ಯ ಏಕ ಸದಸ್ಯ ಸಮಿತಿ ಅಡಿಯಲ್ಲಿ ಭರಿಸಬಹುದಾಗಿದೆ.

ಸನ್ಮಾನ್ಯ ಮುಖ್ಯ ಮಂತ್ರಿಗಳು ಏಕ ಸದಸ್ಯ ಸಮಿತಿಯ ಅವಧಿಯನ್ನು ದಿನಾಂಕ : 1–4–2011 ರಿಂದ 31–7–2011 ರವರೆಗೆ ಮುಂದುವರೆಸಲು ಅನುಮೋದಿಸಿರುವುದರಿಂದ, ದಿನಾಂಕ : 31–3–2011 ಕ್ಕೆ ಈ ಸಮಿತಿಯ ಕಾರ್ಯಾವಧಿಯು ಮುಕ್ತಾಯಗೊಳ್ಳುತ್ತಿರುವುದರಿಂದ ಅತೀ ತುರ್ತು ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯ ಘಟನೋತ್ತರ ಸಹಮತಿಯನ್ನು ಕಾಯ್ದಿರಿಸಿ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಕೆ. ಬೋರೇಗೌಡ

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

ಪಿ.ಆರ್. 872

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ರೇಷ್ಮೆ ಇಲಾಖೆಯು ಬೆಂಗಳೂರಿನ ಓಕಳಿಪುರಂನಲ್ಲಿ ಹೊಂದಿರುವ ಜಮೀನಿನಲ್ಲಿ ರೇಷ್ಮೆ ಸಂಕೀರ್ಣ ನಿರ್ಮಾಣ ಮಾಡುವ ಬಗ್ಗೆ.

ಓದಲಾಗಿದೆ :

1. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಇವರ ಪತ್ರ ಸಂಖ್ಯೆ: ಪಿಎಸ್/ಸಿಡಿಎಸ್/ಓಕಳಿ/ಬಿಲ್ಡಿಂಗ್/2004, ದಿನಾಂಕ 30–1–2004, 20–9–2004 ಹಾಗೂ ಪತ್ರ ಸಂಖ್ಯೆ: ಬೆರೆವೀಕೆ/ತಾಂ7/ರೇಸಂ/2007–08, ದಿನಾಂಕ 15–6–2007, 7–9–2007, 14–2–2008, 31–3–2008, 6–7–2009, 21–10–2009, 6–2–2010 ಹಾಗೂ 22–11–2010.
2. ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ 31–3–2010

ಪ್ರಸ್ತಾವನೆ :

ರೇಷ್ಮೆ ವ್ಯವಸಾಯವು ಗುಡಿಕೈಗಾರಿಕೆಯಾಗಿದ್ದು, ಗ್ರಾಮಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಜನರಿಗೆ ಉದ್ಯೋಗದ ಅವಕಾಶ ಕಲ್ಪಿಸಿದೆ. ಕರ್ನಾಟಕದಲ್ಲಿ ರೇಷ್ಮೆ ವ್ಯವಸಾಯವನ್ನು ಸುಮಾರು ವರ್ಷಗಳಿಂದ ಕೈಗೊಳ್ಳಲಾಗುತ್ತಿದೆ. ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕವು ದೇಶದಲ್ಲಿ ಪ್ರಮುಖ

ಸ್ಥಾನ ಹೊಂದಿರುತ್ತದೆ. ರೇಷ್ಮೆ ಇಲಾಖೆಯು ರೇಷ್ಮೆ ವ್ಯವಸಾಯದಲ್ಲಿ ತೊಡಗಿರುವ ರೈತರಿಗೆ ತಾಂತ್ರಿಕ ಮಾಹಿತಿ ನೀಡುವ, ಹಿಪ್ಪುನೇರಳೆಯ ಸುಧಾರಿತ ಬೇಸಾಯದ ಪದ್ಧತಿ ಅಳವಡಿಸುವ ಹೊಸ ಪದ್ಧತಿಯಲ್ಲಿ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ತೊಡಗಿರುವವರಿಗೆ ಕ್ಷೇತ್ರ ಮಟ್ಟದಲ್ಲಿ ಮಾಹಿತಿ ನೀಡುವಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆ ಮತ್ತು ರೇಷ್ಮೆ ಮೂಲ ತಳಿಗಳ ನಿರ್ವಹಣೆಯಲ್ಲಿ ಹಾಗೂ ರೇಷ್ಮೆ ಗೂಡಿನ ವಹಿವಾಟಿಗೆ ರೇಷ್ಮೆ ಮಾರುಕಟ್ಟೆಗಳ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇಲಾಖೆಯು ಕರ್ನಾಟಕ ರಾಜ್ಯಾದ್ಯಂತ ರೇಷ್ಮೆ ಕೃಷಿ ಕ್ಷೇತ್ರ, ರೇಷ್ಮೆ ಬಿತ್ತನೆ ಕೋಠಿ, ರೇಷ್ಮೆ ಗೂಡಿನ ಮಾರುಕಟ್ಟೆ, ರೇಷ್ಮೆ ನೂಲು ಬಿಚ್ಚಾಣಿಕೆ ಕೇಂದ್ರ, ರೇಷ್ಮೆ ತರಬೇತಿ ಸಂಸ್ಥೆಗಳನ್ನು ಹೊಂದಿರುತ್ತದೆ. ರೇಷ್ಮೆ ಇಲಾಖೆಯಲ್ಲಿ ಒಟ್ಟಾರೆಯಾಗಿ 4476 ಅಧಿಕಾರಿ/ಸಿಬ್ಬಂದಿ ವರ್ಗದವರು ಸೇವೆ ಸಲ್ಲಿಸುತ್ತಿದ್ದಾರೆ. ರೇಷ್ಮೆ ಇಲಾಖೆಯು ಬೆಂಗಳೂರಿನ ಓಕಳೀಪುರಂನಲ್ಲಿ 4.752 ಎಕರೆ ಜಮೀನನ್ನು ಹೊಂದಿರುತ್ತದೆ. (ಜಮೀನಿನ ಸರ್ವೆ ನಂಬರ್ 12,14,17 ಮತ್ತು ಕಾರ್ಪೋರೇಷನ್ ವಾರ್ಡ್ ಸಂಖ್ಯೆ 21). ಈ ಜಮೀನನ್ನು ರೇಷ್ಮೆ ಇಲಾಖೆ ರೇಷ್ಮೆ ಬೆಳೆಗಾರರು, ರೇಷ್ಮೆ ನೂಲು ಬಿಚ್ಚಾಣಿಕೆದಾರರು, ರೇಷ್ಮೆ ವರ್ತಕರು ಹಾಗೂ ಇತರರಿಂದ ಸಂಗ್ರಹವಾದ ತೆರಿಗೆಯ ಕ್ರೋಢಿಕೃತ ಅನುದಾನವನ್ನು ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದ ಮೂಲಕ ರೂ. 10.35 ಕೋಟಿಗಳನ್ನ ಉಪಯೋಗಿಸಿ ಖರೀದಿಸಿರುತ್ತದೆ. ಬೆಂಗಳೂರಿನ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ಎಲ್ಲಾ ಕಛೇರಿಗಳಿಗೆ ಒಂದೇ ಕಡೆ ಸ್ವಂತ ಸ್ಥಳಾವಕಾಶವನ್ನು ಮಾಡಿಕೊಡುವುದಕ್ಕಾಗಿ ಹಾಗೂ ಇಲಾಖೆಯ ಸಹೋದರ ಸಂಸ್ಥೆಗಳಾದ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಹಾಗೂ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತಗಳಿಗೆ ಸ್ಥಳಾವಕಾಶ ಒದಗಿಸುವುದಕ್ಕಾಗಿ ಹುಡ್ಕೋದಿಂದ ಸಾಲ ಪಡೆದು ರೇಷ್ಮೆ ಸಂಕೀರ್ಣ ನಿರ್ಮಾಣ ಮಾಡಲು ಮಂಜೂರಾತಿ ಕೋರಿ ಮೇಲೆ ಓದಲಾದ ಕ್ರಮಸಂಖ್ಯೆ (1)ರ ದಿನಾಂಕ 30–1–2004ರ ಪತ್ರದಲ್ಲಿ ರೇಷ್ಮೆ ಆಯುಕ್ತರು ಪ್ರಸ್ತಾವನೆ ಕಳುಹಿಸಿದ್ದರು. ಹುಡ್ಕೋದಿಂದ ಸಾಲ ತೆಗೆದುಕೊಳ್ಳಲು ಭಾರತ ಸಂವಿಧಾನ ಅನುಚ್ಛೇದ 293(3)ರ ಪ್ರಕಾರ ಅವಕಾಶವಿಲ್ಲದ್ದರಿಂದ ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿತ್ತು. ನಂತರ ರೇಷ್ಮೆ ಆಯುಕ್ತರು ರೇಷ್ಮೆ ಸಂಕೀರ್ಣವನ್ನು ಕೆ.ಎಸ್.ಐ.ಐ.ಡಿ.ಸಿ.ಯ ಸಹಯೋಗದಿಂದ ಬಿ.ಒ.ಟಿ. ಆಧಾರದ ಮೇಲೆ ನಿರ್ಮಾಣ ಮಾಡುವ ಬಗ್ಗೆ ಕಳುಹಿಸಿದ್ದ ಮೇಲೆ ಓದಲಾದ ಕ್ರಮಸಂಖ್ಯೆ(1)ರ ದಿನಾಂಕ 15–6–2007ರ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಪ್ರಸ್ತಾವನೆ ಯೋಗ್ಯವಲ್ಲದ್ದರಿಂದ ಈ ಪ್ರಸ್ತಾವನೆಯನ್ನೂ ಸಹ ಕೈಬಿಡಲಾಯಿತು. ಈ ಬಗ್ಗೆ ಮಾನ್ಯ ಸಣ್ಣ ಕೈಗಾರಿಕೆಗಳು ಮತ್ತು ರೇಷ್ಮೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 3–12–2009 ರಂದು ನಡೆದ ಸಭೆಯ ತೀರ್ಮಾನದಂತೆ ರೇಷ್ಮೆ ಭವನವನ್ನು ಇಲಾಖೆಯಿಂದಲೇ ನಿರ್ಮಾಣ ಮಾಡುವುದಕ್ಕಾಗಿ ರೂ. 30.00 ಕೋಟಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ, ಪರಿಷ್ಕೃತ ಪ್ರಸ್ತಾವನೆಯನ್ನು ರೇಷ್ಮೆ ಆಯುಕ್ತರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರ ದಿನಾಂಕ 6–2–2010ರಲ್ಲಿ ಕಳುಹಿಸಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ, ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 31–3–2010 ರಂದು ನಡೆಸಿದ ಸಭೆಯಲ್ಲಿ ರೇಷ್ಮೆ ಸಂಕೀರ್ಣವನ್ನು ಇಲಾಖಾ ವತಿಯಿಂದ ನಿರ್ಮಾಣ ಮಾಡಲು ತೀರ್ಮಾನಿಸಿ, ಈ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕಳುಹಿಸಲು ತೀರ್ಮಾನಿಸಲಾಯಿತು. ಅದರಂತೆ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದ್ದು, ರೇಷ್ಮೆ ಇಲಾಖೆಯು ಓಕಳಿಪುರಂನಲ್ಲಿ ಹೊಂದಿರುವ ಜಮೀನಿನಲ್ಲಿ ಕಟ್ಟಡ ನಿರ್ಮಿಸಲು ಸರ್ಕಾರದ ಅನುಮೋದನೆ ನೀಡಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಾಕೈ 10 ರೇಯೋವಿ 2006, ಬೆಂಗಳೂರು, ದಿನಾಂಕ : 23–5–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರೇಷ್ಮೆ ಇಲಾಖೆಯು ಬೆಂಗಳೂರಿನ ಓಕಳೀಪುರಂನಲ್ಲಿ (ಸರ್ವೆ ನಂ. 12,14,17 ಮತ್ತು ಕಾರ್ಪೋರೇಷನ್ ವಾರ್ಡ್ ಸಂಖ್ಯೆ 21) ಹೊಂದಿರುವ 4.752 ಎಕರೆ ಜಮೀನಿನಲ್ಲಿ ರೇಷ್ಮೆ ಆಯುಕ್ತರು ದಿನಾಂಕ 6–2–2010ರ ಪತ್ರದಲ್ಲಿ ಪ್ರಸ್ತಾವಿಸಿರುವಂತೆ ಹಾಗೂ ನೀಲಿ ನಕ್ಷೆ ಕಳುಹಿಸಿರುವಂತೆ 16,790 ಚದರ ಮೀಟರ್ (1,80,700 ಚದರ ಅಡಿ) ವಿಸ್ತೀರ್ಣದಲ್ಲಿ ರೂ. 30.00 ಕೋಟಿ ವೆಚ್ಚದಲ್ಲಿ ರೇಷ್ಮೆ ಸಂಕೀರ್ಣ ನಿರ್ಮಿಸುವುದಕ್ಕೆ ಸದರಿ ಸಂಕೀರ್ಣದ ಪ್ರಸ್ತಾವಿತ ಕಟ್ಟಡದಲ್ಲಿಯ ಕನಿಷ್ಠ 50% ವಿಸ್ತೀರ್ಣವನ್ನು ಇತರೆ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಅಥವಾ ಸಾರ್ವಜನಿಕ ಪಟ್ಟಿಯಲ್ಲಿ ಒಳಗೊಂಡಿರುವ ಬ್ಲೂಚಿಪ್ ಪ್ರೈವೇಟ್ ಕಂಪನಿಗಳಿಗೆ ಬಾಡಿಗೆಗೆ ನೀಡಲು ಮೀಸಲಿಡಬೇಕೆಂಬ ಷರತ್ತಿನೊಂದಿಗೆ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/985/ವೆಚ್ಚ–1/2010, ದಿನಾಂಕ 11–6–2010 ಹಾಗೂ ಟಿಪ್ಪಣಿ ಸಂಖ್ಯೆ: ಆಇ/61/ವೆಚ್ಚ–1/2011, ದಿನಾಂಕ 12–2–2011 ರಂದು ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಭಾರತಿ ಆರ್. ನಾಯಕ್

ಪೀಠಾಧಿಕಾರಿ (ರೇಷ್ಮೆ)

ಪಿ.ಆರ್. 1287 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕು, ಸಾಲೇಬೀರನಹಳ್ಳಿ ಸಣ್ಣ ನೀರಾವರಿ ಕೆರೆಯ ಬಲದಂಡೆ ಮುಖ್ಯ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನ್ಯಾಯಾಲಯದ ಆದೇಶನುಸಾರ ಹೆಚ್ಚುವರಿ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ಉತ್ತರ)ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010–11/6573, ದಿನಾಂಕ 08–12–2010.

ಪ್ರಸ್ತಾವನೆ :

